ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 18, 2024

ಸಂಪುಟ : 51 ಸಂಚಿಕೆ : 155 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


ದಾವಣಗೆರೆ ಸಮೀಪ ಬಿ.ಕಲಪನಹಳ್ಳಿ ಬಳಿ ಹಳ್ಳ ತುಂಬಿ ಸೇತುವೆ ಮೇಲೆ ನೀರು ಹರಿಯುತ್ತಿರುವುದು


ದಾವಣಗೆರೆ ಪಿಸಾಳೆ ಕಾಂಪೌಂಡ್‌ನಲ್ಲಿ ಮನೆಗಳ ಒಳಗೆ ನೀರು ನುಗ್ಗಿತ್ತು.

## ವಾಲ್ಮೀಕಿ ಭವನಕ್ಕೆ ಅನುದಾನದ ಭರವಸೆ

### ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಸಂಸದೆ ಡಾ.ಪ್ರಭಾ

ದಾವಣಗೆರೆ, ಅ. 17- ಜಿಲ್ಲಾಮಟ್ಟದಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 4 ಕೋಟಿ ರೂ., ತಾಲ್ಲೂಕು ಮಟ್ಟದಲ್ಲಿ ನಿರ್ಮಿಸಲು 2 ಕೋಟಿ ರೂ., ಹೋಬಳಿ ಮತ್ತು ಪಂಚಾಯತಿ ಮಟ್ಟದಲ್ಲಿ 75 ಲಕ್ಷ ರೂ., ಗ್ರಾಮ ಮಟ್ಟದಲ್ಲಿ 20 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳ ಸಂಯುಕ್ತಾಶ್ರಯದಲ್ಲಿ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿ ಜನಜಾತಿಯ ಉನ್ನತ ಗ್ರಾಮ ಯೋಜನೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮೂಲಭೂತ



ಸೌಕರ್ಯ ಒದಗಿಸಲು ಜಿಲ್ಲೆಯ 44 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಈ ಗ್ರಾಮಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಳ್ಳಬೇಕಿದೆ ಎಂದು ಹೇಳಿದರು.

ಪ್ರಧಾನಮಂತ್ರಿ ಆದಿ ಆದರ್ಶ ಗ್ರಾಮ ಯೋಜನೆಯಡಿಯಲ್ಲಿ ಪ್ರಥಮ ಹಂತದಲ್ಲಿ 7 ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಹಾಗೂ ಎಲ್ಲಾ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದರು.

ನಾನು ಕೂಡ ವಾಲ್ಮೀಕಿ (2ನೇ ಪುಟಕ್ಕೆ)

## ಸರ್ಕಾರದ ಪತನಕ್ಕೆ ಸಾವಿರ ಕೋಟಿ ರೂ. : ಯತ್ನಾಳ್ ವಿರುದ್ಧ ಎಫ್.ಐ.ಆರ್

ದಾವಣಗೆರೆ, ಅ. 17 - ರಾಜ್ಯ ಸರ್ಕಾರದ ಪತನಕ್ಕೆ ನಾಯಕರೊಬ್ಬರು ಸಾವಿರ ಕೋಟಿ ರೂ.ಗಳನ್ನು ಸಂಗ್ರಹಿಸಿದ್ದಾರೆ ಎಂಬ ಆರೋಪ ಮಾಡಿರುವ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಇಲ್ಲಿನ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಗರಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಯತ್ನಾಳ್ ಅವರು, ಸರ್ಕಾರದ



ಪತನಕ್ಕೆ ನಾಯಕರೊಬ್ಬರು ಸಾವಿರ ಕೋಟಿ ರೂ. ಸಂಗ್ರಹಿಸಿದ್ದಾರೆ ಎಂದು ಆರೋಪಿಸಿದ್ದರು. ಈ ಬಗ್ಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು ನೀಡಿದ್ದರು. ನಂತರ ಈ ದೂರು ಇಲ್ಲಿನ ಗಾಂಧಿನಗರ ಠಾಣೆಗೆ ವರ್ಗಾವಣೆಗೊಂಡಿದೆ.

ಅಧಿಕಾರವಿಲ್ಲದೇ ಹತಾಶರಾಗಿರುವ ಬಿಜೆಪಿಯ ಕೆಲ ನಾಯಕರು ರಾಜ್ಯ ಸರ್ಕಾರವನ್ನು ಪತನಗೊಳಿಸಲು ಸಂಚು ರೂಪಿಸಿದ್ದು ಯತ್ನಾಳ್ ಅವರ ಹೇಳಿಕೆಯಿಂದ ಸ್ಪಷ್ಟವಾಗಿದೆ.

ಅಕ್ರಮ ಹಣ ವರ್ಗಾವಣೆ ನಡೆಯುತ್ತಿದ್ದು, ಹೇಳಿಕೆ ನೀಡಿದ ಯತ್ನಾಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಮನೋಹರ್ ದೂರಿನಲ್ಲಿ ತಿಳಿಸಿದ್ದರು.

## ಜಿಲ್ಲೆಯಲ್ಲಿ ಆರ್ಭಟಿಸಿದ ಮಳೆರಾಯ

### ತಗ್ಗು ಪ್ರದೇಶದ ಮನೆಗಳಿಗೆ ನೀರು, ಒಂದೇ ದಿನ 33.7 ಮಿ.ಮೀ. ಮಳೆ

ದಾವಣಗೆರೆ, ಅ. 17 – ಜಿಲ್ಲೆಯಲ್ಲಿ ಗುರುವಾರ 33.7 ಮಿ.ಮೀ.ಗಳ ಧಾರಾಕಾರ ಮಳೆಯಾಗಿದ್ದು, ದಾವಣಗೆರೆ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ 59 ಮಿ.ಮೀ. ಮಳೆಯಾಗಿದೆ.

ಹರಿಹರ ತಾಲ್ಲೂಕಿನಲ್ಲಿ 40.3 ಮಿ.ಮೀ., ಜಗಳೂರಿನಲ್ಲಿ 39.8 ಮಿ.ಮೀ., ಚನ್ನಗಿರಿಯಲ್ಲಿ 20.1 ಮಿ.ಮೀ., ನ್ಯಾಮತಿಯಲ್ಲಿ 15.5 ಮಿ.ಮೀ. ಹಾಗೂ ಹೊನ್ನಾಳಿಯಲ್ಲಿ 13.3 ಮಿ.ಮೀ. ಮಳೆಯಾಗಿದೆ.

ದಾವಣಗೆರೆ ಹಾಗೂ ಹರಿಹರದಲ್ಲಿ ಸುರಿದ ಧಾರಾಕಾರ ಮಳೆಯಿಂದ ಹಲವೆಡೆ ಅವಾಂತರ ಸೃಷ್ಟಿಯಾಗಿತ್ತು. ತಗ್ಗು ಪ್ರದೇಶಗಳಲ್ಲಿನ ಬಡಾವಣೆಗಳಲ್ಲಿ ನೀರು ನುಗ್ಗಿತ್ತು. ಹರಿಹರ ನಗರದ ಬೆಂಕಿ ನಗರ ಹಾಗೂ ಕಾಳಿದಾಸ ನಗರಗಳಲ್ಲಿ ನೀರು ನುಗ್ಗಿದ (2ನೇ ಪುಟಕ್ಕೆ)

### ಹರಿಹರದಲ್ಲಿ ಗೋಡೆ ಕುಸಿದು ಮಗುವಿಗೆ ಗಾಯ

ಹರಿಹರ, ಅ.17 - ನಿನ್ನೆ ರಾತ್ರಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ನಗರದ ಆಶ್ರಯ ಬಡಾವಣೆ, ಬೆಂಕಿನಗರ, ಕಾಳಿದಾಸನಗರ, ಇಂದ್ರಾನಗರ, ಭೀಮನಗರ ಸೇರಿದಂತೆ ಇತರೆ ಬಡಾವಣೆಯ ಸುಮಾರು 100 ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಭೀಮ ನಗರದ ಮನೆಯೊಂದರ ಗೋಡೆ ಕುಸಿದು ಗುಲಾಬ್‌ಜಾನ್ ಎಂಬುವರ ಐದು ವರ್ಷದ ಮಗು ಆಯಿಶಾಗೆ ಪೆಟ್ಟು ಬಿದ್ದಿದ್ದು, ಚಿಕಿತ್ಸೆಗಾಗಿ ಮಗುವನ್ನು ದಾವಣಗೆರೆ ಐಟೆಕ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಮಗು ಸಾವು-ಬದುಕಿನ ಮಧ್ಯೆ ಹೋರಾಟ ನಡೆಸಿದೆ ಎಂದು ವರದಿಯಾಗಿದೆ.

ಬೆಂಕಿನಗರ ಬಡಾವಣೆಯ ಪಕ್ಕದಲ್ಲಿ ಹಾದು ಹೋಗಿರುವ ಚಾನಲ್ ಮತ್ತು ರಾಜ ಕಾಲುವೆಯಲ್ಲಿ ಕಸ ಕಡ್ಡಿ ಕಟ್ಟಿಕೊಂಡು ನೀರು ಸರಾಗವಾಗಿ ಮುಂದೆ ಸಾಗದೇ ಇರುವುದರಿಂದ ಬೆಂಕಿನಗರ, ಕಾಳಿದಾಸ ನಗರ, ಇಂದ್ರಾನಗರ, ಆಶ್ರಯ ಬಡಾವಣೆ ಸೇರಿದಂತೆ, ಹಲವು ಬಡಾವಣೆಯ ಮನೆಗಳಿಗೆ ನೀರು ನುಗ್ಗಿದ್ದು, ಸ್ಥಳೀಯ ನಿವಾಸಿಗಳು ನೀರನ್ನು ಹೊರ ಹಾಕಲು ಹರ ಸಾಹಸ ಮಾಡಿದ್ದಾರೆ.

ಅಧಿಕಾರಿಗಳ ಸಹಿತ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಬಿ.ಪಿ. ಹರೀಶ್ (4ನೇ ಪುಟಕ್ಕೆ)



### ರೈಲ್ವೆ ಟಿಕೆಟ್ ಕಾಯ್ದಿರಿಸುವ ಅವಧಿ 60 ದಿನಗಳಿಗೆ ಇಳಿಕೆ

ನವದೆಹಲಿ, ಅ. 17 - ಬರುವ ನವೆಂಬರ್ 1ರಿಂದ ಮುಂಗಡ ಟಿಕೆಟ್ ಕಾಯ್ದಿರಿಸುವ ಅವಧಿಯನ್ನು 60 ದಿನಗಳಿಗೆ ಇಳಿಸಲು ರೈಲ್ವೆ ಮಂಡಳಿ ನಿರ್ಧರಿಸಿದೆ. ಪ್ರಸಕ್ತ 120 ದಿನಗಳ ಮುಂಚೆ ಟಿಕೆಟ್ ಕಾಯ್ದಿರಿಸಲು ಅವಕಾಶ ಇದೆ. ಅಕ್ಟೋಬರ್ 31ರವರೆಗೆ 120 ದಿನ ಮುಂಚೆ ಟಿಕೆಟ್ ಕಾಯ್ದಿರಿಸಲು ಅವಕಾಶ ಇರಲಿದೆ ಎಂದು ರೈಲ್ವೆ ಮಂಡಳಿ ಸುತ್ತೋಲೆಯಲ್ಲಿ ತಿಳಿಸಲಾಗಿದೆ. 2015ರ ಮಾರ್ಚ್ ತಿಂಗಳಲ್ಲಿ ರೈಲ್ವೆ ಸಚಿವಾಲಯವು ಮುಂಗಡ ಟಿಕೆಟ್ ಕಾಯ್ದಿರಿಸುವ ಅವಧಿಯನ್ನು 60 ದಿನಗಳಿಂದ 120 ದಿನಗಳಿಗೆ ಹೆಚ್ಚಿಸಿತ್ತು.






# ಅಧಿಕಾರಿ, ಸಿಬ್ಬಂದಿ ಮುತುವರ್ಜಿಯಿಂದ ಕೆಲಸ ಮಾಡದಿದ್ದರೆ ಸಮಸ್ಯೆ ಮತ್ತಷ್ಟು ಉಲ್ಬಣ



ಹರಿಹರ, ಅ.17 - ವಿಪತ್ತು ನಿರ್ವಹಣಾ ಸಮಯದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಮುತುವರ್ಜಿ, ಶಿಸ್ತು ಬದ್ಧತೆಯಿಂದ ಕರ್ತವ್ಯ ನಿರ್ವಹಣೆ ಮಾಡದೇ ಹೋದರೆ, ಜನರ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಳ್ಳುತ್ತವೆ. ಆದ್ದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಷ್ಠೆಯಿಂದ ಕೆಲಸ ಮಾಡುವಂತೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ ಹೇಳಿದರು.

ಇಲ್ಲಿನ ಬೆಂಕಿನಗರ ಬಡಾವಣೆಯ ಮಳೆ ಹಾನಿ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸಿ, ಪತ್ರಕರ್ತರೊಂದಿಗೆ ಅವರು ಮಾತನಾಡಿದರು. ಅಧಿಕಾರಿ ಮತ್ತು ಜನಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತಂದಾಗ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೆಂಕಿನಗರ ಮತ್ತು ಕಾಳಿದಾಸ ಬಡಾವಣೆಯ ಮನೆಗಳಿಗೆ ನೀರು ನುಗ್ಗುವ ಸಮಸ್ಯೆ ಬಗ್ಗೆ ತಹಶಿಲ್ದಾರ್ ಮತ್ತು ಪೌರಾಯುಕ್ತರಿಂದ ಮಾಹಿತಿ ಸಂಗ್ರಹಿಸಲಾಗಿದ್ದು, ಇಲ್ಲಿನ ಜನರ ಬಹುದಿನಗಳ ಬೇಡಿಕೆಯಾದ ರಾಜ ಕಾಲುವೆ ಮತ್ತು ಚಾನಲ್ ಗೆ ತಡೆಗೋಡೆ ನಿರ್ಮಿಸಲು ಕೂಡಲೇ ಜಿಲ್ಲಾಧಿಕಾರಿ ಬಳಿ ಚರ್ಚಿಸಿ, ಸೂಕ್ತ ಪರಿಹಾರ ಕಂಡುಕೊಳ್ಳಲಾಗುತ್ತದೆ ಎಂದರು.

ಜೈ ಭೀಮನಗರದಲ್ಲಿ ಮನೆಯ ಗೋಡೆ ಬಿದ್ದು, ಆಯೇಶಾ ಎಂಬ ಮಗು ತೀವ್ರ ಗಾಯಗೊಂಡು ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗುವಿನ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಸ್ಪತ್ರೆಯ ವೈದ್ಯರ ಬಳಿ ಚರ್ಚೆ ಮಾಡಿದ್ದು, ಮಗುವಿನ ರಕ್ಷಣೆಗೆ ಸೂಕ್ತ ನೆರವು ನೀಡಲಾಗುತ್ತದೆ ಎಂದು ಹೇಳಿದರು.

**ಹರಿಹರ ತಾಲ್ಲೂಕಿನ ಮಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಿದ ಪ್ರಭಾ ಮಲ್ಲಿಕಾರ್ಜುನ್**

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಸದಸ್ಯರಾದ ಬಿ. ಅಲ್ತಾಫ್, ಶಾಯಿನಾಬಾನು ದಾದಾಪೀರ್, ಬಾಬುಲಾಲ್ ಮಾತನಾಡಿ, ಬೆಂಕಿ ನಗರದಲ್ಲಿ ಹರಿಯುವ ಚಾನಲ್ ನಲ್ಲಿ ಹೂಳು ತುಂಬಿಕೊಂಡು ನೀರು ಮನೆಗಳಿಗೆ ನುಗ್ಗಿದೆ, ತಡೆ ಗೋಡೆ ನಿರ್ಮಿಸಿಕೊಡುವಂತೆ ಮತ್ತು ರಾಜ ಕಾಲುವೆ ನಿರ್ಮಾಣ ಮಾಡುವಂತೆ ಸಂಸದರಿಗೆ ಮನವಿ ಮಾಡಿದರು.

ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ತಡೆಗೋಡೆ ನಿರ್ಮಾಣಕ್ಕೆ, ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಜೊತೆಗೆ ಸಭೆ ಮಾಡಿ ತಡೆಗೋಡೆ ನಿರ್ಮಿಸುವುದಾಗಿ ಭರವಸೆ ನೀಡಿದರು.

ಮನೆಗಳಿಗೆ ನೀರು ನುಗ್ಗಿರುವ ನಿರಾಶ್ರಿತರ ಕುಟುಂಬದ ಸದಸ್ಯರಿಗೆ ಸರ್ಕಾರದ ಮಾನದಂಡಗಳ ಪ್ರಕಾರ ಈಗಾಗಲೇ ಕಾಳಜಿ ಕೇಂದ್ರವನ್ನು ತೆರೆದು ಊಟ ಉಪಚಾರ ಮಾಡಿಸಲಾಗಿದೆ ಎಂದರು.

ಪೌರಾಯುಕ್ತ ಸುಬ್ರಮಣ್ಯ ಶೆಟ್ಟಿ ಮಾತನಾಡಿ, ನಗರಸಭೆಯಲ್ಲಿ ಅಧಿಕಾರಿಗಳ, ಸಿಬ್ಬಂದಿಗಳ ಕೊರತೆ ಕಾರಣ ಕೆಲಸಗಳಾಗುತ್ತಿಲ್ಲ. ಹಿಂದಿನ ಅಧಿಕಾರಿಗಳು ಮಾಡಿರುವ ಎಡವಟ್ಟಿನಿಂದ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ ಎಂದು ಸಂಸದರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಿಎಸ್ಐ ಶ್ರೀಪತಿ ಗನ್ನಿ, ಮುಖಂಡರಾದ ದಾದಾಪೀರ್ ಭಾನುವಳ್ಳಿ, ಎಲ್.ಬಿ. ಹನುಮಂತಪ್ಪ, ಸಚಿನ್ ಕೊಂಡಜ್ಜಿ, ನಾರಾಯಣ, ತಾಲ್ಲೂಕು ಆಹಾರ ನಿರೀಕಕ ನಸ್ರುಲ್, ವಿ.ಎ. ಗಳಾದ ಹೇಮಂತ್ ಕುಮಾರ್, ಸಮೀರ್, ಪೊಲೀಸ್ ರವಿಕುಮಾರ್, ಮಂಜುನಾಥ್ ಇತರರು ಹಾಜರಿದ್ದರು.

# ವಿಶ್ವವಿದ್ಯಾಲಯಗಳಲ್ಲಿ ಓದದಿದ್ದರೂ ವಾಲ್ಮೀಕಿ, ಬುದ್ಧ, ಬಸವ, ಕನಕರ ಆದರ್ಶಗಳು ಶ್ಲಾಘನೀಯ



**ಹೊನ್ನಾಳಿ ತಾಲ್ಲೂಕಿನ ಕಾರ್ಯಕ್ರಮದಲ್ಲಿ ಶಾಸಕ ಡಿ.ಜಿ. ಶಾಂತನಗೌಡ ಪ್ರಶಂಸೆ**

ಹೊನ್ನಾಳಿ, ಅ. 17 - ರಾಮಾಯಣ ಮಹಾಕಾವ್ಯದ ವೈಶಿಷ್ಟ್ಯ ಮತ್ತು ಅದರ ಜನಪ್ರಿಯತೆಯಿಂದಾಗಿ ಮಹರ್ಷಿ ವಾಲ್ಮೀಕಿಯವರು ಕವಿಕುಲ ಸಾರ್ವಭೌಮರಾಗಿ ದೇಶದ ಸಾಂಸ್ಕೃತಿಕ ಲೋಕದಲ್ಲಿ ನಿತ್ಯವೂ ಆರಾಧಿಸಲ್ಪಡುತ್ತಿದ್ದಾರೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ತಾಲ್ಲೂಕು ಆಡಳಿತ, ಸಮಾಜದ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ಗುರುವಾರ ಪಟ್ಟಣದ ಪುರಸಭೆ ಅವರಣದ ಕನಕ ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಾಲ್ಮೀಕಿ, ಬುದ್ದ, ಬಸವ ಕನಕ ಮುಂತಾದವರು ಯಾವುದೇ ವಿಶ್ವವಿದ್ಯಾಲ ಯಗಳಲ್ಲಿ ಓದದೇ ಇದ್ದರೂ ಅವರು ಸಮಾಜಕ್ಕೆ ನೀಡಿದ ಮಾರ್ಗದರ್ಶನ, ಆದರ್ಶಗಳು ಜಗತ್ತಿನಲ್ಲಿ ಸೂರ್ಯ - ಚಂದ್ರರು ಇರುವತನಕ ಮಾನವ ಕುಲಕ್ಕೆ ಪ್ರಸ್ತುತವಾಗಿರುತ್ತದೆ ಎಂದು ಹೇಳಿದರು.

ವಾಲ್ಮೀಕಿಯವರ ರಾಮಾಯಣ, ವ್ಯಾಸರ ಮಹಾಭಾರತ ಗ್ರಂಥಗಳು ದೇಶದ ಸಾಮಾಜಿಕ, ರಾಜತಾಂತ್ರಿಕ, ಪ್ರಜಾತಂತ್ರ ವ್ಯವಸ್ಥೆಗಳಿಗೆ ಉತ್ತಮ ಸಂದೇಶಗಳನ್ನು ನೀಡುವ ಮಹಾ ಸಾಹಿತ್ಯ ಪ್ರಕಾರಗಳಾಗಿವೆ ಎಂದು ಹೇಳಿದರು.

ಉಪವಿಭಾಗಾಧಿಕಾರಿ ಅಭಿಷೇಕ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದ ಅನೇಕ ಭಾಷೆಗಳ ಕವಿಗಳು ಮಹರ್ಷಿ ವಾಲ್ಮೀಕಿ ಅವರ ಮಹಾಕಾವ್ಯ ರಾಮಾಯಣದಿಂದ ಪ್ರಭಾವಿತರಾಗಿದ್ದು, ರಾಷ್ಟ್ರಕವಿ ಕು.ವೆಂ.ಪು ಅವರ ರಾಮಾಯಣ ದರ್ಶನಂ ಹಾಗೂ ತೆಲಗು ಕವಿ ವಿಶ್ವನಾಥ ಸತ್ಯನಾರಾಯಣದಿಂದ ರಚಿತವಾದ ರಾಮಾಯಣ ಕಲ್ಪವೃಕ್ಷಮು ಈ ಕೃತಿಗಳಿಗೆ ಜ್ಞಾನಪೀಠ ಪ್ರಸಸ್ತಿ ದೊರೆತಿದ್ದು ರಾಮಾಯಣ ಕೃತಿಯಲ್ಲಿ ಮನೋಜ್ಞ ಪಾತ್ರಗಳ ಮೂಲಕ ನಿರೂಪಿಸಿರುವ ಜೀವನ ಮೌಲ್ಯಗಳು ಮತ್ತು ಆದರ್ಶಗಳು ಜಗತ್ತಿನ ಯಾವುದೇ ಕಾವ್ಯದಲ್ಲೂ ಕಂಡುಬರುವುದಿಲ್ಲ ಎಂದು ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಧನಂಜಯ ಉಪನ್ಯಾಸ ನೀಡಿ, ಸುಮಾರು 24 ಸಾವಿರ ಶ್ಲೋಕಗಳನ್ನು ಒಳಗೊಂಡಿರುವ ರಾಮಾಯಣ ಮಹಾ ಕಾವ್ಯವು ಭಾರತದ ಸಂವಿಧಾನವನ್ನೂ ಒಳಗೊಂಡಂತೆ ಕಲೆ, ಸಂಸ್ಕೃತಿ, ಸಂಗೀತ, ನಾಟಕ, ರಂಗಭೂಮಿ ಮುಂತಾದ ಕ್ಷೇತ್ರಗಳ ಮೇಲೆ ಅಗಾಧ ಪ್ರಭಾವವನ್ನು ಬೀರಿದ್ದು, ಜಗತ್ತಿನ ಅನೇಕ ರಾಷ್ಟ್ರಗಳ ಭಾಷೆಗಳಿಗೂ ಅನುವಾದವಾಗಿದೆ ವಾಲ್ಮೀಕಿ ಅವರ ರಾಮಾಯಣ ಮಹಾಕಾವ್ಯವೇ ನಮಗೆ ದಾರಿದೀಪವಾಗಿದೆ ಎಂದು ಹೇಳಿದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಶಿವಾನಂದಪ್ಪ ಹಾಗೂ ಇತರರು ಮಾತನಾಡಿದರು.

ವಾಲ್ಮೀಕಿ ಸಮಾಜದ ಗೌರವಾಧ್ಯಕ್ಷ ಕೋಣನತಲೆ ನಾಗಪ್ಪ,ಕಾರ್ಯದರ್ಶಿ ಸಿ.ಹನುಮಂತಪ್ಪ, ಹಿರಿಯ ಮುಖಂಡ ಮಾರಿಕೊಪ್ಪದ ತಿಮ್ಮಪ್ಪ, ಪುರಸಭೆ ಅಧ್ಯಕ್ಷ ಮೈಲಪ್ಪ, ಮುಖ್ಯಾಧಿಕಾರಿ ಟಿ.ಲೀಲಾವತಿ, ತಹಶೀಲ್ದಾರ್ ಪಟ್ಟರಾಜ ಗೌಡ, ತಾ.,ಪಂ, .ಇ.ಓ. ಪ್ರಕಾಶ, ಪಿ.ಪಿ.ಐ. ಸುನಿಲ್ ಕುರ್ಮಾ, ಬಿ.ಇ.ಓ. ನಿಂಗಪ್ಪ, ಕೆ.ರಂಗನಾಥ, ಕ್ಯಾಸಿನಕೆರೆ ಶೇಖರಪ್ಪ, ಸಮಾಜದ ಖಜಾಂಚಿ ಕುಳಗಟ್ಟೆ ಹನುಮಂತಪ್ಪ, ಸಮಾಜ ಕಲ್ಯಾಣಾಧಿಕಾರಿ ಉಮಾ, ಬಿ.ಸಿ.ಎಂ. ಅಧಿಕಾರಿ ಮೃತ್ಯುಂಜಯ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಾಲ್ಮೀಕಿ ಭವನಕ್ಕೆ ಅನುದಾನದ ಭರವಸೆ

**(1ನೇ ಪುಟದಿಂದ)** ಆದರ್ಶಗಳನ್ನು ಮೈಗೂಡಿಸಿಕೊಳ್ಳುತ್ತೇನೆ. ರಾಮಾಯಣ ಎಂದಾ ಕ್ಷಣ ನೆನಪಾಗುವುದು ಮರ್ಯಾದ ಪುರುಷೋತ್ತಮ ಶ್ರೀರಾಮಚಂದ್ರ ಮತ್ತು ರಾಮರಾಜ್ಯ. ರಾಮಾಯಣ ಹಾಗೂ ರಾಮರಾಜ್ಯ ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ರಾಮಾಯಣ ಮಹಾಕಾವ್ಯದ ಪ್ರತಿಯೊಂದು ಪಾತ್ರಗಳೂ ಸಹ ಜೀವನದ ಮೇಲೆ ಪರಿಣಾಮ ಬೀರುತ್ತವೆ. ರಾಮಾಯಣದ ಮೌಲ್ಯಗಳನ್ನು ಪ್ರತಿಯೊಬ್ಬರೂ ಸಹ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಾಯಕೊಂಡದಲ್ಲಿರುವ ವೀರ ಮದಕರಿ ನಾಯಕ ಸಮಾಧಿ ಅಭಿವೃದ್ಧಿಗೆ ಶ್ರಮಿಸಲಾಗುವುದು. ಇತ್ತೀಚಿನ ದಿನಗಳಲ್ಲಿ ಹಬ್ಬಗಳು ಪೊಲೀಸ್ ಭದ್ರತೆಯಲ್ಲಿಯೇ ಆಚರಿಸುವಂತಹ ವಾತಾವರಣ ನಿರ್ಮಾಣವಾಗಿದೆ. ಶಾಂತಿ ಕಾಪಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ವಾಲ್ಮೀಕಿ ಜಯಂತಿ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಇಡೀ ಮನುಕುಲವೇ ಆಚರಿಸುವಂತಹ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

ಹಿಂದುಳಿದ ಸಮುದಾಯದಲ್ಲಿ ಹುಟ್ಟಿ ತನ್ನದೇ ಆದ ತಪ: ಶಕ್ತಿ ಮೂಲಕ ಮಹಾನ್ ಋಷಿಯಾಗಿದ್ದಲ್ಲದೇ, ಅವರು ಬರೆದ 'ರಾಮಾಯಣ' ಮಹಾಕಾವ್ಯ ಇಡೀ ಸಾಹಿತ್ಯ ಪ್ರಪಂಚ ಇರೋವರೆಗೂ ಪ್ರಸ್ತುತವಾಗಿರುತ್ತದೆ ಎಂದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಮಾತನಾಡಿ, ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಿಮಾತ್ಯ ಪ್ರದೇಶಗಳ ಸಂಸ್ಕೃತಿ ರಾಮಾಯಣದಿಂದಲೇ ರಚಿತವಾಗಿದ್ದು, ಭಾರತದ ಯಾವುದೇ ಮೂಲೆಗೆ ಹೋದರೂ ನಮ್ಮ ಸಂಸ್ಕೃತಿ ವಿಸ್ತಾರವಾಗಿದೆ ಎಂದು ತಿಳಿಸಿದರು.

ಸಂಸ್ಕೃತ ಪುರಾಣದಲ್ಲಿ ಒಂದು ಪ್ರತೀತಿಯಿದೆ, ಯಾರಾದರೂ ವಿಜಯದಶಮಿ ದಿನದಂದು ರಾಮಾಯಣ ಓದಿದರೆ, ಅವರಿಗೆ ಸಕಲ ಪುಣ್ಯಗಳು ಪ್ರಾಪ್ತಿಯಾಗುತ್ತವೆ ಎಂಬ ನಂಬಿಕೆ ಇದೆ ಎಂದರು.

ರಾಮಾಯಣ ಓದುವುದರಿಂದ ಜೀವನದ ಪಾಠ, ವಿದ್ಯೆ, ಶ್ರದ್ದೆಯನ್ನು ನಾವುಗಳು ಅಳವಡಿಸಿಕೊಳ್ಳುವ ಮಹತ್ವದ ಸಂದೇಶವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ , ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಡಾ. ನವೀನ್ ಸಿ ಮಠದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೇಯರ್ ಕೆ. ಚಮನ್‌ಸಾಬ್ ಮಾತನಾಡಿ, ಜೀವನಕ್ಕೆ ಮಾರ್ಗದರ್ಶನ ಮಾಡುವ ತತ್ವಾದರ್ಶಗಳನ್ನು ವಾಲ್ಮೀಕಿ ಮಹರ್ಷಿ ನೀಡಿದ್ದಾರೆ. ಇಂಡೋನೇಷ್ಯಾದಲ್ಲೂ ಮತ್ತು ಮುಸ್ಲಿಂ ರಾಷ್ಟ್ರಗಳಲ್ಲೂ ರಾಮನ ದೇವಾಲಯಗಳು ಕಂಡು ಬರುತ್ತವೆ ಎಂದರು.

ಇತ್ತೀಚಿನ ದಿನಗಳಲ್ಲಿ ಅವಿಶ್ವಾಸದ ವಾತಾವರಣ ಕಂಡು ಬರುತ್ತಿದ್ದು, ಪರಸ್ಪರ ಪ್ರೀತಿ-ವಿಶ್ವಾಸದಿಂದ ಎಲ್ಲ ಸಮುದಾಯಗಳು ಸೇರಿ ಇಂತಹ ಜಯಂತಿಗಳನ್ನು ಆಚರಿಸುವಂತಾಗಬೇಕು ಎಂದು ಹೇಳಿದರು.

ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷ ವೀರಣ್ಣ ಮಾತನಾಡಿ, ಪರಿಶಿಷ್ಟ ಪಂಗಡದ ಹೆಸರಿನಲ್ಲಿ ಅನ್ಯ ಜಾತಿಯವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವ ಮೂಲಕ ನಮ್ಮ ಹಕ್ಕುಗಳನ್ನು ಕಸಿಯುವ ಪ್ರಯತ್ನ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಇದಕ್ಕೆ ಕಡಿವಾಣ ಹಾಕಬೇಕೆಂದು ಮನವಿ ಮಾಡಿದರು.

ಉಪ ಮೇಯರ್ ಸೋಗಿ ಶಾಂತಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ದೂಡಾ ಆಯುಕ್ತ ತಿಮ್ಮಣ್ಣ ಹುಲ್ಮನಿ, ತಹಶೀಲ್ದಾರ್ ಡಾ. ಅಶ್ವಥ್, ಡಿಡಿಪಿಐ ಜಿ.ಕೊಟ್ರೇಶ್, ವಾಲ್ಮೀಕಿ ಸಮಾಜದ ಮುಖಂಡರಾದ ಆಂಜನೇಯ ಗುರೂಜಿ, ಹುಚ್ಚವ್ವನಹಳ್ಳಿ ಮಂಜುನಾಥ್, ಅಂಜಿನಪ್ಪ ಅಣಜಿ, ವಿಜಯಶ್ರೀ, ಲಕ್ಷ್ಮೀದೇವಿ ವೀರಣ್ಣ, ಗಣೇಶ್ ಹುಲ್ಮನಿ, ಮೀನಾಕ್ಷಿ ಜಗದೀಶ್, ಕೆ.ಎಲ್. ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಮಹರ್ಷಿ ವಾಲ್ಮೀಕಿ ಕುರಿತು ಉಪನ್ಯಾಸ ನೀಡಿದರು. ದೀಪಾ ಕಾರ್ಯಕ್ರಮ ನಿರೂಪಿಸಿದರು.

## ವಾಲ್ಮೀಕಿ ಜಯಂತಿಯಲ್ಲಿ ಸೃಜನಾಗೆ ಸನ್ಮಾನ



ದಾವಣಗೆರೆ, ಅ.17 - ಜಿಲ್ಲಾಡಳಿತದಿಂದ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಇಂದು ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇ. 98.24 ಅಂಕ ಗಳಿಸಿದ ಸೋಮೇಶ್ವರ ವಿದ್ಯಾಲಯದ ಕು. ವೈ.ಎಂ. ಸೃಜನಾ ಅವರನ್ನು ಗೌರವಿಸಲಾಯಿತು. ಸೃಜನಾ, ಹಿರಿಯ ಪತ್ರಕರ್ತ ಯಳನಾಡ ಮಂಜುನಾಥ್ ಹಾಗೂ ಸೋಮೇಶ್ವರ ಶಾಲೆಯ ಇಂಗ್ಲಿಷ್ ಶಿಕ್ಷಕಿ ಶ್ರೀಮತಿ ವಿಜಯಲಕ್ಷ್ಮಿ ದಂಪತಿ ಪುತ್ರಿ.

## ಮಲೇಬೆನ್ನೂರಿನಲ್ಲಿ ಇಂದು ಸಾಮೂಹಿಕ ವಿವಾಹ, ಎಡೆ ಜಾತ್ರೆ




ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಹಾಗೂ ಮರಿಬನ್ನಿ ಅಂಗವಾಗಿ ಇಂದು ಬೆಳಿಗ್ಗೆ 9 ರಿಂದ ಬಾಯಿ ಬೀಗ, ಜವಳ, ಹರಕೆ ಸೇವೆ, 10.30ಕ್ಕೆ ಸಾಮೂಹಿಕ ವಿವಾಹ, 11ಕ್ಕೆ ಮಹಾಮಂಗಳಾರತಿ ಪೂಜೆಯೊಂದಿಗೆ ದೇವಿ ಪುರಾಣ ಮುಕ್ತಾಯ ಮತ್ತು ದೊಡ್ಡ ಎಡೆ ಪೂಜೆ ಗ್ರಾಮದ ಎಲ್ಲಾ ದೇವರುಗಳ ಸಮ್ಮುಖದಲ್ಲಿ ನಡೆಯಲಿದೆ. ನಂತರ ಅನ್ನಸಂತರ್ಪಣೆ ಜರುಗಲಿದೆ.

**ಕಾಳಿಕಾ ಹೋಮ :** ಗುರುವಾರ ಸಂಜೆ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಕಾಳಿಕಾ ಹೋಮ ನೆರವೇರಿತು. ನಂತರ ಡೊಳ್ಳು, ವೀರಗಾಸೆಯೊಂದಿಗೆ ಶ್ರೀ ಸ್ವಾಮಿಯ ಒಡ್ಡೋಲಗವು ತಡರಾತ್ರಿವರೆಗೂ ನಡೆಯಿತು. ಶುಕ್ರವಾರದ ದೊಡ್ಡ ಎಡೆ ಪೂಜೆಗೆ ಕಾಗಿನೆಲೆ, ರಟ್ಟಿಗಳು ಶ್ರೀಗಳು ಭಾಗವಹಿಸಲಿದ್ದಾರೆಂದು ದೇವಸ್ಥಾನದ ಕಾರ್ಯದರ್ಶಿ ಕೆ.ಪಿ.ಗಂಗಾಧರ್ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ ಆರ್ಭಟಿಸಿದ ಮಳೆರಾಯ

**ಹರಿಹರದಲ್ಲಿ ಮಳೆ ; ನೂರಾರು ಮನೆಗಳಿಗೆ ನುಗ್ಗಿದ ನೀರು ಸ್ಥಳಕ್ಕೆ ಶಾಸಕರು, ಅಧಿಕಾರಿಗಳ ಭೇಟಿ**






**(1ನೇ ಪುಟದಿಂದ)** ಕಾರಣ ಜನರು ಸಂಕಷ್ಟ ಎದುರಿಸಬೇಕಾಯಿತು.

ದಾವಣಗೆರೆ ನಗರದ ಪಿಸಾಳೆ ಕಾಂಪೌಂಡ್‌ನ ಹಲವು ಮನೆಗಳಿಗೆ ಬೆಳಗಿನ ಜಾವ ನೀರು ನುಗ್ಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ನೀರು ತೆರವುಗೊಳಿಸಿದರು. ಈರುಳ್ಳಿ ಮಾರುಕಟ್ಟೆ ಹಾಗೂ ಭಾರತ್ ಕಾಲೋನಿ ಸೇರಿದಂತೆ ಹಲವೆಡೆ ಮಳೆ ನೀರಿನಿಂದ ಅವಾಂತರ ಸೃಷ್ಟಿಯಾಗಿತ್ತು. ಹಳೆ ಕುಂದುವಾಡ ಹಾಗೂ ದಾವಣಗೆರೆ ಸಂಪರ್ಕಿಸುವ ರಸ್ತೆ ಜಲಾವೃತವಾಗಿತ್ತು. ಮಾಗಾನಹಳ್ಳಿ ಬಳಿ ಹಳ್ಳ ತುಂಬಿ ಹರಿದು ಸಂಚಾರಕ್ಕೆ ಸಮಸ್ಯೆಯಾಗಿತ್ತು.

ಜಿಲ್ಲೆಯಲ್ಲಿ ಮಳೆಯಿಂದಾಗಿ ಮೂರು ಪಕ್ಕಾ ಮನೆಗಳಿಗೆ ತೀವ್ರ ಹಾನಿಯಾಗಿದೆ. 8 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದೆ. 1 ಕಚ್ಚಾ ಮನೆಗೆ ತೀವ್ರ ಹಾಗೂ 12 ಕಚ್ಚಾ ಮನೆಗಳಿಗೆ ಭಾಗಶಃ ಹಾನಿಯಾಗಿದೆ. 1.13 ಎಕರೆ ಈರುಳ್ಳಿ ನಾಶವಾಗಿದೆ. ಒಟ್ಟಾರೆ 11.53 ಲಕ್ಷ ರೂ.ಗಳ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ಜಿಲ್ಲೆಯಲ್ಲಿ ಅಕ್ಟೋಬರ್ ತಿಂಗಳಲ್ಲಿ ಮಳೆ ಬಿರುಸು ಜೋರಾಗಿದೆ. ಜಿಲ್ಲೆಯಲ್ಲಿ ಅಕ್ಟೋಬರ್ 1ರಿಂದ 17ರವರೆಗೆ 180.3 ಮಿ.ಮೀ. ಮಳೆ ಸುರಿದಿದೆ. ವಾಡಿಕೆ ಮಳೆ ಪ್ರಮಾಣ 73.2 ಮಿ.ಮೀ. ಆಗಿದೆ. ಇದುವರೆಗೂ ವಾಡಿಕೆಗಿಂತ ಶೇ.146ರಷ್ಟು ಹೆಚ್ಚು ಮಳೆಯಾಗಿದೆ.

ಬರದ ನಾಡು ಎಂದೇ ಕರೆಯಲಾಗುವ ಜಗಳೂರು ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.251 ಪಟ್ಟು ಹೆಚ್ಚು ಮಳೆಯಾಗಿದೆ. ತಾಲ್ಲೂಕಿನಲ್ಲಿ ವಾಡಿಕೆ ಮಳೆ ಪ್ರಮಾಣ 62.2 ಮಿ.ಮೀ. ಆಗಿದ್ದರೆ, ಇದುವರೆಗೂ 218.3 ಮಿ.ಮೀ. ಮಳೆಯಾಗಿದೆ.

ಅಕ್ಟೋಬರ್ 22ರವರೆಗೂ ರಾಜ್ಯದ ಉತ್ತರ ಒಳನಾಡಿನಲ್ಲಿ ಮಳೆ ಮುಂದುವರೆಯಲಿದೆ. ನಂತರದಲ್ಲಿ ಮಳೆ ತೀವ್ರತೆ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಮಳೆಯಿಂದ ನದಿಯಂತಾದ ರಸ್ತೆ : ನೀರಿನಲ್ಲಿ ಸಿಲುಕಿದ ಬೈಕ್ ಸವಾರ

ದಾವಣಗೆರೆ, ಅ. 17 - ಭಾರೀ ಮಳೆ ನೀರಿನಿಂದ ನದಿಯಂತಾದ ರಸ್ತೆಯನ್ನು ದಾಟುತ್ತಿದ್ದ ವ್ಯಕ್ತಿ ಬೈಕ್ ಸಮೇತ ಬಿದ್ದಿರುವ ಘಟನೆ ಸಮೀಪದ ಹಳೇ ಕುಂದುವಾಡ ರಸ್ತೆಯಲ್ಲಿ ನಡೆದಿದೆ.

ಕೊಚ್ಚಿಕೊಂಡು ಚರಂಡಿ ಪಾಲಾಗುತ್ತಿದ್ದ ವ್ಯಕ್ತಿಯನ್ನು ಅಲ್ಲಿನ ಜನರು ರಕ್ಷಿಸಿದ್ದಾರೆ. ಜೀವ ಭಯದಿಂದ ವಾಹನ ಸವಾರರು ರಸ್ತೆ ದಾಟುತ್ತಿದ್ದುದು ಕಂಡು ಬಂದಿದೆ.

ಜಾಗದ ಸಮಸ್ಯೆ ಹಿನ್ನೆಲೆ ಅರ್ಧಕ್ಕೆ ನಿಂತ ಕಾಮಗಾರಿಯಿಂದಾಗಿ ಈ ರೀತಿ ಅವಘಡಗಳು ಸಂಭವಿಸುತ್ತಿವೆ ಎಂಬುದು ಜನರ ದೂರಾಗಿದೆ. ಮಹಾನಗರ ಪಾಲಿಕೆ ಈ ಬಗ್ಗೆ ಕ್ರಮ ಕೈಗೊಳ್ಳುತ್ತಾ ಎಂಬುದನ್ನು ಕಾದು ನೋಡಬೇಕಿದೆ.

## ಹರಿಹರ : ಕೃಷಿ ಹೊಂಡ ನಿರ್ಮಾಣಕ್ಕೆ ಅರ್ಜಿ

ಹರಿಹರ, ಅ.17 - ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕೆ ಹರಿಹರ ತಾಲ್ಲೂಕಿನ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯು ಪ್ಯಾಕೇಜ್ ಮಾದರಿಯಲ್ಲಿದ್ದು, ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥಿನ್ ಹೊದಿಕೆ, ಡೀಸೆಲ್ ಪಂಪ್‌ಸೆಟ್ ಹಾಗೂ ಸೂಕ್ಷ್ಮ ನೀರಾವರಿ ಘಟಕವನ್ನು ಹೊಂದಿದೆ.

ಆಸಕ್ತ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಈ ಹಿಂದೆ ಕೃಷಿ ಹೊಂಡ ನಿರ್ಮಾಣ ಮಾಡಿಸದ ಕುರಿತು ಸಂಬಂಧಿಸಿದ ಗ್ರಾ.ಪಂ. ಹಾಗೂ ತಾಲ್ಲೂಕು ತೋಟಗಾರಿಕೆ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಪಡೆದು ಅರ್ಜಿಯೊಂದಿಗೆ ಸಲ್ಲಿಸಬೇಕು ಎಂದು ಹರಿಹರ ಸಹಾಯಕ ಕೃಷಿ ನಿರ್ದೇಶಕ ಎ. ನಾರನಗೌಡ ತಿಳಿಸಿದ್ದಾರೆ.

## ನಂದಿಗಾವಿಯಲ್ಲಿ ಮಳೆಗೆ ಮನೆ ಕುಸಿದು ಗಾಯ

**ಮಲೇಬೆನ್ನೂರು**

ಮಲೇಬೆನ್ನೂರು, ಅ.17 - ನಂದಿಗಾವಿ ಗ್ರಾಮದಲ್ಲಿ ಮಳೆಯಿಂದಾಗಿ ಮನೆಯೊಂದು ಕುಸಿದು ಬಿದ್ದ ಪರಿಣಾಮ ತಾಯಿ - ಮಗಳು ಮತ್ತು ಮೊಮ್ಮಗಳು ಗಾಯಗೊಂಡಿರುವ ಘಟನೆ ಗುರುವಾರ ಬೆಳಿಗ್ಗೆ ನಡೆದಿದೆ.

ಗ್ರಾಮದ ಎ.ಕೆ.ಕಾಲೋನಿಯ ಪಕ್ಕೀರಮ್ಮ ಇವರ ಮನೆಯಲ್ಲಿ ಈ ಘಟನೆ ನಡೆದಿದ್ದು, ಘಟನೆಯಲ್ಲಿ ಪಕ್ಕೀರಮ್ಮ ಮತ್ತು ಮಗಳಾದ ಸಿದ್ದಮ್ಮ ಪರಸಪ್ಪ ಹಾಗೂ ಮೊಮ್ಮಗಳಾದ ಯಮುನಾ (6 ವರ್ಷ) ಇವರು ಗಾಯಗೊಂಡು, ದಾವಣಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಯ ವಿಷಯ ತಿಳಿದ ತಕ್ಷಣ ಗ್ರಾಮ ಲೆಕ್ಕಾಧಿಕಾರಿ ವಿಜಯ ಮಹಾಂತೇಶ್ ಸ್ಪಂದಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಸಾವು - ಬದುಕಿನ ಮಧ್ಯ ಹೋರಾಟ ಮಾಡುತ್ತಿರುವ ಪುಟ್ಟ ಬಾಲಕಿ ಯಮುನಾ ಅವರ ಆರೋಗ್ಯ ವಿಚಾರಿಸಿದ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ತಂದೆ-ತಾಯಿ, ಅಜ್ಜಿಗೆ ಧೈರ್ಯ ಹೇಳಿ, ಉಚಿತ ಚಿಕಿತ್ಸೆ ಕೊಡಿಸುವುದಾಗಿ ಹೇಳಿದ್ದಾರೆ.


**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ಶಕುಂತಲಮ್ಮ ಬೇತೂರು**

(ದಿ. ಮುರಿಗೇಶಪ್ಪ ಬೇತೂರು ಇವರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಸದಾ ಮುನ್ನಡೆಯುತ್ತಿರುವ...

ನಿಮ್ಮ ಮಕ್ಕಳಾದ

**ಶ್ರೀಮತಿ ಮತ್ತು ಶ್ರೀ ಸುರೇಶ್ ಬೇತೂರು**
**ಶ್ರೀಮತಿ ಮತ್ತು ಶ್ರೀ ರಾಜೇಶ್ ಬೇತೂರು**
**ಶ್ರೀಮತಿ ಮತ್ತು ಶ್ರೀ ಪ್ರಕಾಶ್ ಬೇತೂರು**
**ಹಾಗೂ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು**
**ಮತ್ತು ಬೇತೂರು ಬಂಧು – ಮಿತ್ರರು**

ವರ್ಷದ ಪೂಜಾ ಕಾರ್ಯಕ್ರಮವನ್ನು ದಿನಾಂಕ 18.10.2024ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ದೊಡ್ಡಪೇಟೆ ಬಸವ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.



**ಜಿಗಳಿ ಗ್ರಾಮದ ಮಲ್ಲಪ್ಪಗೌಡ್ರ ಶಿವಾನಂದಪ್ಪ ನಿಧನ**



ಹರಿಹರ ತಾ॥ ಜಿಗಳಿ ಗ್ರಾಮದ ಜಮೀನ್ದಾರರಾದ ದಿ॥ ಕೆ. ಮಲ್ಲಪ್ಪಗೌಡ್ರು ಅವರ ಹಿರಿಯ ಪುತ್ರರಾದ

**ಜಿ. ಎಂ. ಶಿವಾನಂದಪ್ಪ (ಆನಂದಪ್ಪ)**

ಇವರು ದಿನಾಂಕ : 17.10.2024ರ ಗುರುವಾರ ಮಧ್ಯಾಹ್ನ 3.00 ಗಂಟೆಗೆ ಹೃದಯಾಘಾತದಿಂದ ನಿಧನರರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು, ಪತ್ನಿ, ಸಹೋದರಿ, ಸಹೋದರರು, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 18.10.2024ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಜಿಗಳಿ ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತರು : ಮಲ್ಲನಗೌಡ್ರ ವಂಶಸ್ಥರು ಮತ್ತು ಜಿಗಳಿ ಗ್ರಾಮಸ್ತರು ಹಾಗೂ ಬಂಧು - ಮಿತ್ರರು**



**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಶಿಲ್ಪಾ ರತ್ನಾಕರ್ ಬಗರೆ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು,
ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದೆ.
ನಿಮ್ಮ ಸ್ಮರಣೆಯಲ್ಲಿರುವ ಪತಿ : ರತ್ನಾಕರ್ ಬಗರೆ, ಪುತ್ರಿ : ವೈಷ್ಣವಿ ಆರ್.
ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.

**ಉಷಾ ಟ್ರೇಡಿಂಗ್ ಕಂಪನಿ**
ಮಂಡಿಪೇಟೆ, ಗೂಡ್ ಶೆಡ್ ರಸ್ತೆ, ದಾವಣಗೆರೆ.
ಮೊ: 78921 40655, 94484 49617



**ಜಿಗಳಿ ಗ್ರಾಮದ ದೊಡ್ಡಘಟ್ಟದ ಪುಟ್ಟಮ್ಮ ನಿಧನ**



ಹರಿಹರ ತಾ॥ ಜಿಗಳಿ ಗ್ರಾಮದ ದೊಡ್ಡಘಟ್ಟದ ಪುಟ್ಟಮ್ಮ (86 ವರ್ಷ) ಇವರು ದಿನಾಂಕ 17-10-2024 ರ ಗುರುವಾರ ರಾತ್ರಿ 9 ಗಂಟೆಗೆ ನಿಧನರಾದರು. ನಿವೃತ್ತ ಶಿಕ್ಷಕರಾದ ಡಿ. ರವೀಂದ್ರಪ್ಪ, ಬೀದಿ ನಾಟಕ ಕಲಾವಿದ ಡಿ. ರಂಗನಾಥ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 18-10-2024 ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಜಿಗಳಿಯಲ್ಲಿ ನೆರವೇರಲಿದೆ.


**ನೇತ್ರದಾನ ಶ್ರೇಷ್ಠದಾನ**

# ಉಚಿತದ ಸುಳಿಗೆ ಸಿಲುಕುತ್ತಿರುವ ರಾಜ್ಯಗಳು



ಹರಿಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ನಂತರ, ದೇಶದ ಚಿತ್ತ ಈಗ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ಚುನಾವಣೆಯತ್ತ ನೆಟ್ಟಿದೆ. ಆದರೆ, ಚುನಾವಣೆ ಬೇರೆಯಾದರೂ ಪುಕ್ಕಟೆ ಕೊಡುಗೆಗಳ ಭರಾಟೆ ಮಾತ್ರ ಒಂದೇ ಆಗಿದೆ.

ಆ ಪಕ್ಷ, ಈ ಪಕ್ಷ ಎಂಬ ಭೇದವಿಲ್ಲದೇ ಎಲ್ಲರೂ ಪುಕ್ಕಟೆ ಕೊಡುಗೆಗಳ ಮಂತ್ರ ಉಚ್ಚರಿಸುತ್ತಿದ್ದಾರೆ. ಹರಿಯಾಣದಲ್ಲಿ ಬಿಜೆಪಿ ಮಹಿಳೆಯರಿಗೆ ತಿಂಗಳಿಗೆ 2,100 ರೂ. ಕೊಡುಗೆ ನೀಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದಿದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ ಲಡ್ಕಿ ಬಹಿನ್ ಯೋಜನೆಯಡಿ 1,500 ರೂ. ನೀಡುತ್ತಿದೆ.

ಜಾರ್ಖಂಡ್ ಸರ್ಕಾರ ತಿಂಗಳಿಗೆ 1,000 ರೂ. ನೀಡುತ್ತಿದ್ದ ಕೊಡುಗೆಯನ್ನು ಈಗ 2,500 ರೂ.ಗಳಿಗೆ ಹೆಚ್ಚಿಸಿದೆ. ತಾನು ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ತಿಂಗಳಿಗೆ 2,100 ರೂ. ನೀಡುವುದಾಗಿ ಬಿಜೆಪಿ ಹೇಳಿತ್ತು. ಹೀಗಾಗಿ ಜಾರ್ಖಂಡ್‌ನ ಆಡಳಿತಾರೂಢ ಜೆ.ಎಂ.ಎಂ. ಮೈತ್ರಿ ಸರ್ಕಾರ ಚುನಾವಣೆಗೆ ಮೊದಲೇ ಉಚಿತ ಕೊಡುಗೆ ಹೆಚ್ಚಿಸಿದೆ.

ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಉಚಿತ ಕೊಡುಗೆಗಳನ್ನು ಭರ್ಜರಿಯಾಗಿ ಜನಪ್ರಿಯಗೊಳಿಸಿದ್ದರು. ಕೇಂದ್ರಾಡಳಿತ ಸ್ಥಾನಮಾನದಲ್ಲಿರುವ ದೆಹಲಿ, ಹೇಳಿ ಕೇಳಿ ದೇಶದ ರಾಜಧಾನಿ. ಇಲ್ಲಿ ಸಿರಿವಂತರ ಸಂಖ್ಯೆ ಹೆಚ್ಚಾಗಿದೆ. ಜೊತೆಗೆ, ಪೊಲೀಸ್ ಸೇರಿದಂತೆ ಹಲವಾರು ವಿಷಯಗಳು ಕೇಂದ್ರದ ವ್ಯಾಪ್ತಿಗೆ ಬರುತ್ತವೆ. ಹೀಗಾಗಿ ಕೇಂದ್ರಾಡಳಿತವಾದ ದೆಹಲಿ ಸರ್ಕಾರ ಉಚಿತ ಕೊಡುಗೆಗಳನ್ನು ಕೊಟ್ಟೂ ತಕ್ಕ ಮಟ್ಟಿಗೆ ಆರ್ಥಿಕ ಸ್ಥಿತಿ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿತ್ತು.

ಆದರೆ, ಪಂಜಾಬ್ ರೀತಿಯ ಆರ್ಥಿಕವಾಗಿ ದುರ್ಬಲವಾದ ರಾಜ್ಯಗಳಲ್ಲೂ ಉಚಿತ ಕೊಡುಗೆ ಕೊಟ್ಟಿದ್ದರ ಪರಿಣಾಮವನ್ನು ಮತದಾರ ಮಹಾಪ್ರಭುಗಳು ಈಗಾಗಲೇ ಅನುಭವಿಸುತ್ತಿದ್ದಾರೆ. ಹಿಮಾಚಲ ಪ್ರದೇಶ ಉಚಿತ ಕೊಡುಗೆಗಳ ಕಾರಣದಿಂದ ತರಹೇವಾರಿ ಸಮಸ್ಯೆ ಎದುರಿಸುತ್ತಿದೆ. ಅಧಿಕಾರಿಗಳು ಪರಿಸ್ಥಿತಿ ನಿಭಾಯಿಸಲು ಶೌಚಾಲಯಗಳ ಮೇಲೆ ತೆರಿಗೆ ಹೇರುವ ವಿನೂತನ ಚಿಂತನೆಗಳನ್ನೂ ನಡೆಸಿದ್ದರು. ಮುಖ್ಯಮಂತ್ರಿ ಹಾಗೂ ಸಚಿವರು ಒಂದೆರಡು ತಿಂಗಳು ವೇತನ ಪಡೆಯುವುದಿಲ್ಲ ಎಂದು ಹೇಳಿದ್ದರು.

**ಆರ್ಥಿಕ ಶಕ್ತಿಯೇ ಇಲ್ಲವೆಂದರೆ ಬಲಿಷ್ಠವಾಗಿರಲು ಸಾಧ್ಯವೇ?**

ಇಷ್ಟಾದರೂ, ರಾಜ್ಯಗಳ ಚುನಾವಣೆ ನಡೆಯುವಾಗ ಉಚಿತ ಕೊಡುಗೆಗಳನ್ನು ಕೊಡುವುದಾಗಿ ಎಲ್ಲ ಪಕ್ಷಗಳೂ ಹೇಳುತ್ತಿವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉಚಿತ ಕೊಡುಗೆಗಳನ್ನು ರೇವಡಿ ಎಂದು ಲೇವಡಿ ಮಾಡಿದ್ದರು. ಆದರೆ, ನಂತರ ತಮ್ಮ ನಿಲುವು ಬದಲಿಸಿ, ಬಿಜೆಪಿಯ ಉಚಿತ ಕೊಡುಗೆಗಳನ್ನು ತಾವೇ ಪ್ರಚಾರ ಮಾಡುತ್ತಿದ್ದಾರೆ.

ರಾಜಕಾರಣದಲ್ಲಿ ಇತ್ತೀಚಿನ ದಿನಗಳಲ್ಲಿ ಪ್ರಚಲಿತವಾಗಿರುವ ವಿಷಯ ಎಂದರೆ ಸಂವಿಧಾನ ರಕ್ಷಣೆ ಕುರಿತದ್ದು. ಸಂವಿಧಾನದ ಪ್ರತಿಯನ್ನು ಸಮಾವೇಶಗಳಲ್ಲಿ ಪ್ರದರ್ಶಿಸುವುದು ಕೆಲವರ ಅಭ್ಯಾಸವಾಗಿದೆ. ರಾಜ್ಯದ ಸ್ವಾಯತ್ತತೆ ಹಾಗೂ ಆರ್ಥಿಕ ಹಕ್ಕುಗಳ ಬಗ್ಗೆಯೂ ಮಾತುಗಳು ಕೇಳಿ ಬರುತ್ತವೆ. ಆದರೆ, ರಾಜ್ಯಗಳು ತಮ್ಮ ಬೊಕ್ಕಸದ ಹಣವನ್ನೆಲ್ಲ ಪುಕ್ಕಟೆ ಕೊಡುಗೆಗಳಿಗೆ ಖರ್ಚು ಮಾಡಿದರೆ ಬಲಿಷ್ಠವಾಗಿ ಉಳಿಯಲು ಸಾಧ್ಯವಾಗುತ್ತದೆಯೇ?

ರಾಜಕೀಯ ಸ್ವಾತಂತ್ರ್ಯದಷ್ಟೇ ಆರ್ಥಿಕ ಸ್ವಾತಂತ್ರ್ಯವೂ ಅತಿ ಮುಖ್ಯ. ದೇಶಕ್ಕೆ 1947ರಲ್ಲಿ ರಾಜಕೀಯ ಸ್ವಾತಂತ್ರ್ಯ ದೊರೆತರೂ, ದೇಶದ ಜನತೆಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದ್ದು ಅತ್ಯಲ್ಪ. 1991ರವರೆಗೂ ಇನ್ಸ್‌ಪೆಕ್ಟರ್ ರಾಜ್ ಕಾರಣದಿಂದಾಗಿ ದೇಶದ ಜನತೆ ಆರ್ಥಿಕವಾಗಿ ಸ್ವತಂತ್ರರಾಗಲು, ಸ್ವಾವಲಂಬಿ ಆಗಲು ಸಾಧ್ಯವಾಗಿರಲಿಲ್ಲ. ಪಿ.ವಿ. ನರಸಿಂಹ ರಾವ್ ಅವರು 1991ರಲ್ಲಿ ಜಾರಿಗೆ ತಂದ ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣಗಳ ಕಾರಣದಿಂದ ದೇಶದ ಜನತೆ ತಕ್ಕ ಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯ ಪಡೆದುಕೊಂಡರು. ದೇಶದ ಆರ್ಥಿಕ ಬೆಳವಣಿಗೆ ಉನ್ನತ ಮಟ್ಟಕ್ಕೆ ತಲುಪಿತು.

ಆರ್ಥಿಕ ಸ್ವಾವಲಂಬನೆ ಹಾಗೂ ಬೆಳವಣಿಗೆಗಳ ಕಾರಣದಿಂದ ಜನತೆಗೆ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯ. ದೇಶ ಆರ್ಥಿಕವಾಗಿ ಸಮೃದ್ಧವಾಗಿದ್ದರೆ ಮಾತ್ರ ಜನರು ತಮ್ಮ ಹಕ್ಕುಗಳನ್ನು ಸಮರ್ಥವಾಗಿ ಪಡೆಯಲು ಸಾಧ್ಯ. ಹೀಗಿರುವಾಗ ರಾಜ್ಯಗಳ ಬೊಕ್ಕಸಗಳೇ ಖಾಲಿ ಖಾಲಿ ಆದರೆ ರಾಜ್ಯ ಸರ್ಕಾರಗಳು ಬಲಿಷ್ಠವಾಗಲು ಸಾಧ್ಯವೇ? ಕೇಂದ್ರದಿಂದ ಬರುವ ಅನುದಾನದ ಊರುಗೋಲು ಇಟ್ಟುಕೊಂಡೇ ನಡೆಯಬೇಕು ಎನ್ನುವುದಾದರೆ ರಾಜ್ಯಗಳ ಗತಿ ಏನು?

ಸದ್ಯಕ್ಕೆ ಎಲ್ಲಾ ಪಕ್ಷಗಳು ಉಚಿತ ಕೊಡುಗೆಗಳ ವ್ಯಸನಕ್ಕೆ ಸಿಲುಕಿವೆ. ಕೆಟ್ಟ ಮೇಲೆ ಬುದ್ಧಿ ಬಂತು ಎಂಬ ರೀತಿಯಲ್ಲಿ ಆರ್ಥಿಕತೆಗೆ ಸಂಕಷ್ಟ ಎದುರಾದ ನಂತರ ರಾಜಕೀಯ ಪಕ್ಷಗಳು ಉಚಿತ ಕೊಡುಗೆ ನಿಲ್ಲಿಸಬಹುದೇನೋ. ಆದರೆ, ಆ ವೇಳೆಗಾಗಲೇ ಜನ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಆ ಪರಿಸ್ಥಿತಿ ಸರಿದೂಗಿಸಲು ಇನ್ನಷ್ಟು ಸಮಯ ಬೇಕಾಗುವುದಂತೂ ಸತ್ಯ.

**- ಜಿ.ಎನ್. ಕಾಮತ್**, ದಾವಣಗೆರೆ

# ಹೋಬಳಿಗೆ ಒಂದು ವಸತಿ ಶಾಲೆ ಪ್ರಾರಂಭ



ಬೆಂಗಳೂರು, ಅ. 17 - ತಳ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಪ್ರತಿ ಹೋಬಳಿಗೆ ಒಂದರಂತೆ ವಸತಿ ಶಾಲೆ ಪ್ರಾರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಈ ಸಮುದಾಯಗಳನ್ನು ಉಳಿದವರ ಜೊತೆ ಸಮನಾಗಿ ನಿಲ್ಲಿಸಲು ನಾನು ಮುಂದಾಗುತ್ತಿರುವುದನ್ನು ಸಹಿಸದೆ ನನ್ನ ಕಾಲೆಳೆಯುತ್ತಿದ್ದಾರೆ ಎಂದು ದೂರಿದರು.

ಪರಿಶಿಷ್ಟ ಜಾತಿ, ವರ್ಗಕ್ಕೆ ವಾರ್ಷಿಕ 30,000 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ಆ ಹಣವನ್ನು ಸಮರ್ಪಕವಾಗಿ ಸದ್ಬಳಕೆ ಮಾಡಬೇಕು. ಈ ಹಣದಲ್ಲಿ ಶಿಕ್ಷಣ ನೀಡಿದರೆ ಮುಂದೆ ಅವರೂ ಸಮಾಜದಲ್ಲಿ ಬೆಳೆಯುತ್ತಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮೀಸಲಿರಿಸಿದ ಹಣದಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಒತ್ತು ಕೊಡಲಾಗುವುದು, ಅದರಲ್ಲೇ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ವಾಲ್ಮೀಕಿ ಜಯಂತಿ ಅಂಗವಾಗಿ ಐದು ಮಂದಿಗೆ ವಾಲ್ಮೀಕಿ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರವಾಗಲೀ, ಬಿಜೆಪಿ ಅಧಿಕಾರದಲ್ಲಿರುವ ಯಾವುದೇ ರಾಜ್ಯದಲ್ಲಾಗಲೀ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಜಾರಿಗೆ ತಂದಿಲ್ಲ. ಬಾಯಿ ಮಾತಲ್ಲಿ ಸಮಾನತೆ ಬರಲ್ಲ, ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು ಎಂದರು.

ನಮ್ಮ ಸರ್ಕಾರ ಎಲ್ಲಾ ಧರ್ಮ, ಜಾತಿಯ ಬಡವರಿಗೆ ಆರ್ಥಿಕ ಶಕ್ತಿ ಕೊಡಲು ಗ್ಯಾರಂಟಿಗಳನ್ನು ಜಾರಿಗೆ ತಂದರೆ, ಬಿಜೆಪಿಯವರು ವಿರೋಧಿಸಿದರು, ಗ್ಯಾರಂಟಿ ಫಲಾನುಭವಿಗಳು ಬಿಜೆಪಿಗೆ ಸರಿಯಾಗಿ ಪಾಠ ಕಲಿಸಬೇಕು ಎಂದು ಹೇಳಿದರು.

ಬಡ್ತಿಯಲ್ಲಿ ಮೀಸಲಾತಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿಯಿತು. ಅದನ್ನು ಮೊದಲಿಗೆ ಜಾರಿಗೆ ತಂದಿದ್ದು ನಮ್ಮ ಸರ್ಕಾರ. ಗುತ್ತಿಗೆಯಲ್ಲಿ ಮೀಸಲಾತಿ ಮೊದಲಿಗೆ ತಂದಿದ್ದು ನಮ್ಮ ಸರ್ಕಾರ. ಇದನ್ನು ನಾಡಿನ ಜನತೆ ಅರ್ಥಮಾಡಿಕೊಳ್ಳಬೇಕು.

ನಾನು ಹೇಳುತ್ತಿದ್ದೇನೆ ಎನ್ನುವ ಕಾರಣಕ್ಕೆ ನೀವು ಇದನ್ನೆಲ್ಲಾ ನಂಬಬೇಡಿ. ಸತ್ಯ, ಸುಳ್ಳನ್ನು ಪರಾಮರ್ಷಿಸಿ, ವಿವೇಚಿಸಿ, ಸತ್ಯವನ್ನು ಧೈರ್ಯವಾಗಿ, ಬಹಿರಂಗವಾಗಿ ಮಾತಾಡುವುದನ್ನು ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ಬೆಳೆಸಿಕೊಳ್ಳಬೇಕು. ಇದೇ ಮಹರ್ಷಿ ವಾಲ್ಮೀಕಿ ಅವರಿಗೆ ನಾವು-ನೀವು ಸಲ್ಲಿಸುವ ಗೌರವ ಎಂದರು.

ಎಸ್‌ಸಿಎಸ್‌ಪಿ/ಟಿಎಸ್‌ಪಿ ಮೂಲಕ ಪರಿಶಿಷ್ಟ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಆಯವ್ಯಯದಲ್ಲಿ ಹಣ ಮೀಸಲಿಟ್ಟ ಮೊದಲ ಸರ್ಕಾರ ನಮ್ಮದು, ತಳಹಂತದ ಸಮುದಾಯಗಳಿಗೆ ವಸತಿ ಶಾಲೆಗಳನ್ನು ಆರಂಭಿಸಿದ್ದು ನಾವು ಎಂದು ಹೇಳಿದರು.

ಪರಿಶಿಷ್ಟ ಜಾತಿಯ ಎಲ್ಲಾ ವಸತಿ ಶಾಲೆ ಹಾಗೂ ರಾಯಚೂರು ವಿಶ್ವವಿದ್ಯಾಲಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರು ಇಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ಶಾಕುಂತಲಾ ನಾಟಕ ಬರೆದ ಕಾಳಿದಾಸ ಕುರುಬ ಸಮುದಾಯದವರು. ಮಹಾಭಾರತ ಬರೆದ ವ್ಯಾಸರು ಬೆಸ್ತ ಸಮುದಾಯದವರು. ರಾಮಾಯಣ ಬರೆದ ಮಹರ್ಷಿ ವಾಲ್ಮೀಕಿ ಸಮುದಾಯದವರು. ದರೋಡೆ ಮಾಡಿಕೊಂಡು ಓಡಾಡುತ್ತಿದ್ದ ವಾಲ್ಮೀಕಿ ರಾಮಾಯಣ ಬರೆಯಲು ಸಾಧ್ಯವಾ ಎಂದು ಕಥೆ ಕಟ್ಟಿ ಸುಳ್ಳು ಹೇಳಿದರು.

ತಳಹಂತದ ಸಮುದಾಯಗಳು, ಶೂದ್ರರು ಶಿಕ್ಷಣ, ಸಂಸ್ಕೃತ ಕಲಿಯುವುದು ನಿಷಿದ್ಧವಾಗಿತ್ತು. ಆದರೆ, ಸಂಸ್ಕೃತ ಕಲಿತು ಶ್ಲೋಕಗಳ ಮೂಲಕ ವಾಲ್ಮೀಕಿ ಜಗತ್ಪ್ರಸಿದ್ಧ ರಾಮಾಯಣ ಮಹಾಕಾವ್ಯ ಬರೆದಿದ್ದು ಹೆಮ್ಮೆಯ ಸಂಗತಿ.

ಶಿಕ್ಷಣ ಕಲಿಯುವ ಅವಕಾಶ ಸಿಕ್ಕಾಗ ಇವರೆಲ್ಲಾ ಕಲಿತರು, ಬರೆದರು, ಜಗತ್ತಿಗೇ ಪ್ರೇರಣೆಯಾದರು. ಸಮಪಾಲು, ಸಮಬಾಳು, ಸಮಾನ ಅವಕಾಶಗಳ ಬಗ್ಗೆ ವಾಲ್ಮೀಕಿ ಹೇಳಿದ್ದರು. ರಾಮಾಯಣದ ರಾಮರಾಜ್ಯ ಅಂದರೆ ಸಮಪಾಲಿನ, ಸಮಾನ ಅವಕಾಶಗಳ ರಾಜ್ಯ ಎಂದರ್ಥ ಎಂದರು.

# ಕಲಾಕುಂಚದಿಂದ ದೀಪಾವಳಿ, ರಾಜ್ಯೋತ್ಸವ, ಸಾಂಸ್ಕೃತಿಕ ಸಂಭ್ರಮ

ದಾವಣಗೆರೆ, ಅ. 17 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ದೀಪಾವಳಿ, ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಸಾರ್ವಜನಿಕವಾಗಿ ಪುರುಷರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಉಚಿತವಾಗಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

**ಸ್ಪರ್ಧೆಗಳಿಗೆ ಆಹ್ವಾನ**

ಇದೇ ದಿನಾಂಕ 27 ರ ಭಾನುವಾರ ಮಧ್ಯಾಹ್ನ 3 ಗಂಟೆಯಿಂದ ಕಲಾಕುಂಚ ಕಛೇರಿ ಸಭಾಂಗಣದಲ್ಲಿ ನಡೆಯಲಿರುವ ಮಕ್ಕಳಿಗೆ ಆಟೋಟ ಸ್ಪರ್ಧೆ, ಮಹಿಳೆಯರಿಗೆ ಆಕರ್ಷಕ ಗೃಹಿಣಿ ಸ್ಪರ್ಧೆ, ಸಾರ್ವಜನಿಕವಾಗಿ ಮಹಾಭಾರತ, ರಾಮಾಯಣ, ದಾವಣಗೆರೆಯ ಇತಿಹಾಸದ ಕುರಿತು ರಸಪ್ರಶ್ನೆ, ಜಾಣ ಗಣಿತ, ಜಾಣ ಒಗಟು, ಆಕರ್ಷಕ ದಂಪತಿಗಳು ಸ್ಪರ್ಧೆಗಳು ಏರ್ಪಾಡಾಗಿವೆ.

ಆಸಕ್ತರು ಇದೇ ದಿನಾಂಕ 20ರೊಳಗೆ 99457 85170 ಈ ವ್ಯಾಟ್ಸಾಪ್ ನಂಬರ್‌ಗೆ ಹೆಸರು ನೋಂದಾಯಿಸಬೇಕು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ಉಮೇಶ್ ತಿಳಿಸಿದ್ದಾರೆ.

# ಚನ್ನಪಟ್ಟಣ ಜೆಡಿಎಸ್‌ಗೆ ಬಿಡಲು ಯಡಿಯೂರಪ್ಪ ಒಲವು



ಬೆಂಗಳೂರು, ಅ. 17 - ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಪರ ನಿಲ್ಲುವುದು ಬೇಡ, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಡೋಣ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ನಾವು ಮತ್ತು ಜೆಡಿಎಸ್ ಪ್ರತಿಷ್ಠೆಯಾಗಿ ತೆಗೆದುಕೊಂಡು ಹೋರಾಟ ಮಾಡೋಣ, ಒಗ್ಗಟ್ಟಿನಿಂದ ಕೆಲಸ ಮಾಡಿ ಎಲ್ಲಾ ಕ್ಷೇತ್ರಗಳನ್ನೂ ನಮ್ಮದಾಗಿಸಿಕೊಳ್ಳೋಣ ಎಂದಿದ್ದಾರೆ.

ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಬಸವರಾಜ ಬೊಮ್ಮಾಯಿ ಸೇರಿದಂತೆ ರಾಜ್ಯ ನಾಯಕರು, ಚನ್ನಪಟ್ಟಣದಿಂದ ಯೋಗೇಶ್ವರ್ ಅವರಿಗೆ ಟಿಕೆಟ್ ನೀಡಬೇಕು, ಜೆಡಿಎಸ್‌ಗೆ ಬಿಟ್ಟುಕೊಡುವುದು ಬೇಡ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡ ಅವರಿಗೆ ಮನವಿ ಮಾಡಿದ್ದರು.

ಈ ಬೆಳವಣಿಗೆ ನಂತರ ಅಶೋಕ್ ಮತ್ತು ಬೊಮ್ಮಾಯಿ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಸಮಾಲೋಚನೆ ನಡೆಸಿ ಯೋಗೇಶ್ವರ್ ಪರ ನಿಂತಿದ್ದರು. ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆ ಯಡಿಯೂರಪ್ಪ ಅವರು, ಅಶೋಕ್ ಮತ್ತು ಬೊಮ್ಮಾಯಿ ಅವರನ್ನು ಪ್ರತ್ಯೇಕವಾಗಿ ಕರೆಸಿಕೊಂಡು, ಬಿಜೆಪಿ ಮತ್ತು ಜೆಡಿಎಸ್ ಮತ್ತಷ್ಟು ಬಲವಾಗಿ ಒಂದುಗೂಡಬೇಕು. ಅವರ ಕ್ಷೇತ್ರದಲ್ಲಿ ನಮ್ಮ ಹಸ್ತಕ್ಷೇಪ ಬೇಡ ಎಂದ ನಂತರ ತಮ್ಮ ನಿಲುವು ಬದಲಾಯಿಸಿದ್ದಾರೆ.

ಇಂದು ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಅವರು ನಮ್ಮ ಹಿರಿಯ ನಾಯಕರು, ಸಹಜವಾಗಿ ಭೇಟಿ ಮಾಡುತ್ತೇವೆ. ಚುನಾವಣೆ ಬಗ್ಗೆ ಬಂದು ಮಾತನಾಡು ಎಂದಿದ್ದರು, ಮಾತಾಡಿದ್ದೇನೆ. ಶಿಗ್ಗಾಂವಿ ಕ್ಷೇತ್ರದ ಬಗ್ಗೆಯೂ ಚರ್ಚೆ ನಡೆಯಿತು ಎಂದರು.

# ವನಿತಾ ಸಾಹಿತ್ಯ ವೇದಿಕೆಯಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಅ.17 - ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪ್ರಬಂಧ (3 ಪುಟಗಳು ಮೀರದಂತೆ) ಸ್ಪರ್ಧೆಯನ್ನು ಸಾರ್ವಜನಿಕರಿಗಾಗಿ ಏರ್ಪಡಿಸಲಾಗಿದೆ. ಸ್ಪರ್ಧೆಯ ವಿಷಯ : ಸಮಸ್ಯೆಗಳ ಸುಳಿಯಲ್ಲಿ ಮಹಿಳೆ'. ಪ್ರಬಂಧವನ್ನು ಇದೇ ದಿನಾಂಕ 30ರೊಳಗೆ ಶ್ರೀಮತಿ ಎಸ್. ಎಂ. ಮಲ್ಲಮ್ಮ, ಮಾಂಟೆಸೊರಿ ಕಾನ್ವೆಂಟ್, ಕೆ.ಬಿ. ಬಡಾವಣೆ, ದಾವಣಗೆರೆ. (ದೂರವಾಣಿ ಸಂಖ್ಯೆ: 99801 48289) ಇವರಿಗೆ ಕಳುಹಿಸಬಹುದು.

# ದೇಶ ಕಂಡ ಶ್ರೇಷ್ಠ ಕವಿಗಳಲ್ಲಿ ವಾಲ್ಮೀಕಿ ಸಹ ಒಬ್ಬರು

## ಹರಪನಹಳ್ಳಿಯಲ್ಲಿ ಜರುಗಿದ ಜಯಂತ್ಯೋತ್ಸವದಲ್ಲಿ ತಹಶೀಲ್ದಾರ್ ಗಿರೀಶ್‌ಬಾಬು



ಹರಪನಹಳ್ಳಿ,ಅ.17 - ಮಹರ್ಷಿ ವಾಲ್ಮೀಕಿ ಅವರು ದೇಶ ಕಂಡ ಶ್ರೇಷ್ಠ ಕವಿಗಳಲ್ಲಿ ಒಬ್ಬರಾಗಿ ದ್ದಾರೆ ಎಂದು ತಹಶೀಲ್ದಾರ್ ಗಿರೀಶ್‌ಬಾಬು ಹೇಳಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ತಾಲ್ಲೂಕು ಆಡಳಿತ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ತಾಲ್ಲೂಕು ಪಂಚಾಯಿತಿ ಹಾಗೂ ಪುರಸಭೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು

ರಾಮಾಯಣ ಮಹಾಕಾವ್ಯವನ್ನು ಬರೆದಿದ್ದ ಕ್ಕಾಗಿ ವಾಲ್ಮೀಕಿ ಅವರು ಅತ್ಯಂತ ಪ್ರಸಿದ್ಧರಾಗಿದ್ದಾರೆ. ಇದು ಭಗವಾನ್ ವಿಷ್ಣುವಿನ ಎಂಟು ಅವತಾರಗಳ ಕಥೆಯನ್ನು ಹೇಳುತ್ತದೆ. ಮೂಲತಃ ವಾಲ್ಮೀಕಿ ಬರೆದ ರಾಮಾಯಣವು 24,000 ಶ್ಲೋಕಗಳನ್ನು ಒಳಗೊಂಡಿದೆ. ರಾಮಾಯಣವು ಸುಮಾರು 480, 002 ಪದಗಳಿಂದ ಕೂಡಿದೆ. ಇದು ಮಹಾಭಾರತದ ಪೂರ್ಣ ಪಠ್ಯದ ಕಾಲು ಭಾಗವಾಗಿದೆ ಎಂದರು.

ಪಿ.ಡಿ.ಓ ಮಾರುತಿ ವಿಶೇಷ ಉಪನ್ಯಾಸ ನೀಡಿ, ಮಹರ್ಷಿ ವಾಲ್ಮೀಕಿ ಸಂಸ್ಕೃತದ ಮಹಾನ್ ಪ್ರತಿಪಾದಕರಾಗಿದ್ದರು ಮತ್ತು ಮಹಾಕಾವ್ಯ ರಾಮಾಯಣವನ್ನು ಬರೆದಿದ್ದಾರೆ. ಇದು ಹಿಂದೂ ಧರ್ಮದ ಶ್ರೇಷ್ಠ ಮಹಾಕಾವ್ಯಗಳಲ್ಲಿ ಒಂದಾಗಿದೆ. ರಾಮನ ಸಂಪೂರ್ಣ ಜೀವನವನ್ನು ಬಿತ್ತರಿಸಿದೆ. ವಾಲ್ಮೀಕಿಯು ಕವಿಕುಲದ ಗುರುವಾಗಿ ಹಲವಾರು ಕವಿಗಳಿಗೆ ಮತ್ತು ಸಾಹಿತಿಗಳಿಗೆ ಸ್ಪೂರ್ತಿಯ ಸೆಲೆಯಾಗಿದ್ದಾರೆ. ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ವಿವಿಧ ಭಾಷೆಗಳಲ್ಲಿ ಕಾವ್ಯ, ನಾಟಕ, ಕಾದಂಬರಿ ಮತ್ತು ಕತೆಗಳನ್ನು ಅನೇಕರು ರಚಿಸಿದ್ದಾರೆ. ಇಂದಿಗೂ ಸಹ ರಾಮಾಯಣ ಮಹಾಕಾವ್ಯವು ಜಗತ್ತಿನಲ್ಲಿ ಸತ್ವಯುತವಾದ ಮತ್ತು ಮೌಲ್ಯಯುತವಾದ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ವೈ.ಡಿ.ಅಣ್ಣಪ್ಪ ಮಾತನಾಡಿ, ರಾಮಾಯಣ ಮಹಾಕಾವ್ಯದಲ್ಲಿ ಮಾತೃ ದೇವೋ ಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವದಂತಹ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಮಮತೆ, ಸಮತೆ, ಭ್ರಾತೃತ್ವ, ತ್ಯಾಗ, ದೇಶಪ್ರೇಮ, ಅಳಿಲು ಸೇವೆ, ಪಿತೃವಾಕ್ಯ ಪರಿಪಾಲನೆ ಮುಂತಾದ ಹಲವಾರು ಮಾನವೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸಲಾಗಿದೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಅಧ್ಯಕ್ಷರಾದ ಹೆಚ್.ಟಿ.ವನಜಾಕ್ಷಮ್ಮ ಕಾರ್ಯ ನಿರ್ವಹಣಾಧಿಕಾರಿ ಚಂದ್ರಶೇಖರ್, ಅಂಬೇಡ್ಕರ್ ಸಮಾಜದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಮಾತನಾಡಿದರು.

ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ. ಶಿರಹಟ್ಟಿ ದಂಡೆಪ್ಪ, ಕಾರ್ಯದರ್ಶಿ ಜಿಟ್ಟಿನಕಟ್ಟಿ ಹೆಚ್.ಕೆ.ಮಂಜುನಾಥ, ನ್ಯಾಯವಾದಿ ಎಂ.ಸುರೇಶ. ಉಪಾಧ್ಯಕ್ಷ ಮಂಡಕ್ಕಿ ಸುರೇಶ, ಈಡಿಗ ಸಮಾಜದ ಮುಖಂಡ ಇ. ದೇವದಾಸ್, ಪುರಸಭೆ ಸದಸ್ಯರಾದ ಎಂ.ವಿ.ಅಂಜಿನಪ್ಪ, ಟಿ.ವೆಂಕಟೇಶ, ಮುಖಂಡರಾದ ಚಿಕ್ಕೇರಿ ಬಸಪ್ಪ, ನಿಟ್ಟೂರು ಸಣ್ಣಹಾಲಪ್ಪ, ಸಿ.ಪಿ.ಐ. ನಾಗರಾಜ ಕಮ್ಮಾರ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಚಂದ್ರಶೇಖರ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಇಬ್ರಾಹಿಂ ಸಾಬ್, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ಸೇರಿದಂತೆ, ಇತರರು ಇದ್ದರು.

# ವರದಕ್ಷಿಣೆ ಸಾವು: ಆರೋಪಿಗೆ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ

ಚನ್ನಗಿರಿ, ಅ.17 - ವರದಕ್ಷಿಣೆ ಕಿರುಕುಳ ನೀಡಿ ಮಹಿಳೆಯ ಸಾವಿಗೆ ಕಾರಣನಾದ ಆರೋಪಿಗೆ ಇಲ್ಲಿನ 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ, 40 ಸಾವಿರ ದಂಡ ವಿಧಿಸಿದೆ.

ದಂಡದ ಮೊತ್ತದ ಹಣದಲ್ಲಿ 35 ಸಾವಿರ ರೂ. ಸಂತ್ರಸ್ಥೆ ಕುಟುಂಬಕ್ಕೂ, ಉಳಿದ 5 ಸಾವಿರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ್ ಆದೇಶಿಸಿದ್ದಾರೆ.

ಚನ್ನಗಿರಿ ತಾಲ್ಲೂಕು ಮೇದುಗೊಂಡನಹಳ್ಳಿಯ ಮಂಜುನಾಥ ಶಿಕ್ಷಕ ಗುರಿಯಾದ ಆರೋಪಿಯಾಗಿದ್ದು, ತನ್ನ ಮಗಳು ಶೋಭಾರಾಣಿಗೆ ಮಂಜುನಾಥ ಹಾಗೂ ಅವರ ಮನೆಯವರು ವರದಕ್ಷಿಣೆ ತೆಗೆದುಕೊಂಡು ಬರುವಂತೆ ಕಿರುಕುಳ ನೀಡುತ್ತಿದ್ದರು ಎಂದು ತಾಯಿ ನಿಂಗಪ್ಪ ದೂರು ದಾಖಲಿಸಿದ್ದರು.

ಚನ್ನಗಿರಿ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಪ್ರಶಾಂತ್ ಮನ್ನೋಳ್ಳಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಸರ್ಕಾರಿ ವಕೀಲರಾದ ಕೆ.ಎಸ್ ಸತೀಶ್ ನ್ಯಾಯ ಮಂಡನೆ ಮಾಡಿದ್ದರು.

# ಎಂಸಿಸಿ 'ಬಿ' ಬ್ಲಾಕ್ ವಾರ್ಡ್‌ಗೆ ಮೇಯರ್, ಉಪ ಮೇಯರ್, ಆಯುಕ್ತರ ಭೇಟಿ

## ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿರುವ 38ನೇ ವಾರ್ಡ್ ಮಾದರಿ: ಕೆ. ಚಮನ್ ಸಾಬ್



ದಾವಣಗೆರೆ, ಅ.17 - ನಗರದ ಎಂಸಿಸಿ 'ಬಿ' ಬ್ಲಾಕ್‌ನ ವಿವಿಧ ಪ್ರದೇಶಗಳಿಗೆ ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಅಧಿಕಾರಿಗಳೊಂದಿಗೆ ಇಂದು ಭೇಟಿ ನೀಡಿದ ಸಂದರ್ಭದಲ್ಲಿ ವಾರ್ಡಿನ ಸ್ವಚ್ಛತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮೇಯರ್ ಚಮನ್ ಸಾಬ್ ಅವರು, ಪಾಲಿಕೆಯ ಅಧಿಕಾರಿಗಳೊಂದಿಗೆ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡುತ್ತಿದ್ದೇವೆ. ವಾರ್ಡ್‌ಗಳಲ್ಲಿನ ಸಮಸ್ಯೆಗಳನ್ನು ತಿಳಿಯುವ ಕೆಲಸ ಮಾಡಲಾಗುತ್ತಿದೆ. ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ವಾರ್ಡ್ ಗಳಲ್ಲಿನ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ. ಎಂಸಿಸಿ 'ಬಿ' ಬ್ಲಾಕ್ ವಾರ್ಡ್‌ನ ಪ್ರದೇಶಗಳಿಗೆ ಭೇಟಿ ನೀಡಿದ್ದು, ಇಲ್ಲಿನ ಸ್ವಚ್ಛತೆ ಮೆಚ್ಚುವಂಥದ್ದು. ಇದೊಂದು ಮಾದರಿ ವಾರ್ಡ್ ಎಂದರೂ ತಪ್ಪಾಗಲಾರದು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಾರ್ಡ್ ಜನರ ಕುಂದುಕೊರತೆ ಆಲಿಸುವ ಜೊತೆಗೆ ಸ್ವಚ್ಛತೆ, ಕಸ ನಿರ್ವಹಣೆ, ರಸ್ತೆಗಳಲ್ಲಿ ಗುಂಡಿ ಬೀಳದಂತೆ ಎಚ್ಚರ ವಹಿಸುವುದೂ ಸೇರಿದಂತೆ ಹೆಚ್ಚಿನ ಅನುದಾನ ತಂದು ಉತ್ತಮ ಕಾರ್ಯ ಮಾಡುತ್ತಿರುವ ಪಾಲಿಕೆ ಸದಸ್ಯರೂ ಆದ ಆಡಳಿತ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಅವರ ಕಾರ್ಯವೈಖರಿ ಪ್ರಶಂಸನೀಯ. ಜನರೊಂದಿಗಿನ ಒಡನಾಟ, ಅಭಿವೃದ್ಧಿ ಕಾರ್ಯಗಳು, ಶುಚಿತ್ವಕ್ಕೆ ಆದ್ಯತೆ ನೀಡಲಾಗಿದೆ. ನಾವು ನೋಡಿದಾಗಲೇ ಇದು ಗೊತ್ತಾಗುತ್ತದೆ. ಮಾದರಿ ವಾರ್ಡ್ ಮಾತ್ರವಲ್ಲ, ಮಾದರಿ ಕಾರ್ಪೊರೇಟರ್ ಎಂಬ ಪ್ರಶಸ್ತಿ ನೀಡಬಹುದು. ಅಷ್ಟು ಶುದ್ಧವಾಗಿ ವಾರ್ಡ್ ಇದೆ ಎಂದು ಸಂತಸ ವ್ಯಕ್ತಪಡಿಸಿದರು.

ಆಯುಕ್ತರಾದ ರೇಣುಕಾ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿನ ಕೆಲ ವಾರ್ಡುಗಳಲ್ಲಿ ಶುಚಿತ್ವದ ಸಮಸ್ಯೆ ಇದೆ. ಕಸ ವಿಲೇವಾರಿಯ ತೊಂದರೆಯೂ ಇದೆ. ಆದರೆ, ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಈ ರೀತಿಯ ಸಮಸ್ಯೆಗಳು ಇಲ್ಲ. ಕಸ ನಿರ್ವಹಣೆ ತುಂಬಾ ಚೆನ್ನಾಗಿ ಆಗುತ್ತಿದೆ. ಇದು ಹೀಗೆ ಮುಂದುವರಿಯಲಿ. ಮತ್ತಷ್ಟು ಒಳ್ಳೆಯ ಕೆಲಸ ಆಗಲಿ ಎಂದು ಹಾರೈಸಿದರು.

ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ವಾರ್ಡ್‌ನಲ್ಲಿನ ಸ್ವಚ್ಛತೆಗೆ ಜನರು ನೀಡಿದ ಸಹಕಾರವೇ ಕಾರಣ. ಕಸ ವಿಲೇವಾರಿಯ ಯಾವುದೇ ಸಮಸ್ಯೆ ಇಲ್ಲ. ನಾಗರಿಕರು ನೀಡಿದ ಸೂಚನೆಯನ್ನು ಪಾಲಿಸುತ್ತಿದ್ದಾರೆ. ಇದರಿಂದಾಗಿಯೇ ವಾರ್ಡ್ ಇಷ್ಟೊಂದು ಶುಚಿತ್ವದಿಂದ ಇರಲು ಸಾಧ್ಯವಾಗಿದೆ. ಏನೇ ಸಮಸ್ಯೆ ಇದ್ದರೂ ಕೂಡಲೇ ಸ್ಪಂದಿಸುವ ಕಾರ್ಯ ಮಾಡಲಾಗುತ್ತಿದೆ. ಹಿರಿಯ ಶಾಸಕರಾದ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ವಾರ್ಡ್ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಅನುದಾನ ನೀಡಲಿದ್ದಾರೆ. ಒಟ್ಟಾರೆ ವಾರ್ಡ್ ನ ಮತ್ತಷ್ಟು ಸರ್ವತೋಮುಖ ಅಭಿವೃದ್ಧಿಗೆ ಕಟಿಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆಯ ಸೂಪರಿಂಟೆಂಡೆಂಟ್ ಎಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್, ಎಇ, ಎಇಇ, ವಾಟರ್ ವಿಭಾಗದ ಸಿಬ್ಬಂದಿ, ಅಧಿಕಾರಿಗಳು ಮತ್ತಿತರರು ಹಾಜರಿದ್ದರು.


**WANTED/ಕೆಲಸಕ್ಕೆ ಬೇಕಾಗಿದ್ದಾರೆ**

Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.

Qualification : (SSSLC, PUC) English ಓದಲು ಬರಬೇಕು

Address : **ಎ.ಕೆ. ಫಾರ್ಮ**, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.

**ಫೋ : 88678 56784, 99643 75596**

**ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರವರ ಮತ್ತು ಸಿ.ಜೆ.ಎಂ ನ್ಯಾಯಾಲಯದಲ್ಲಿ, ದಾವಣಗೆರೆ**

**ಸಿ.ಆರ್.ಮಿಸ್ ನಂ. 3672024**

**ಅರ್ಜಿದಾರರು** : 1) ಶ್ರೀಮತಿ ಬಿ. ಯಶೋಧಮ್ಮ ತಂದೆ ಚಿಕ್ರಪ್ಪ, ವಯಸ್ಸು 55 ವರ್ಷ, ಗೃಹಿಣಿ. ಕಂದಗಲ್ಲು ಗ್ರಾಮ, ದಾವಣಗೆರೆ ತಾಲ್ಲೂಕು. ದಾವಣಗೆರೆ ಜಿಲ್ಲೆ

2) ಕೆ.ಎಸ್. ರತ್ನಮ್ಮ ತಂದೆ ಚಿಕ್ರಪ್ಪ, ವಯಸ್ಸು 52 ವರ್ಷ, ಗೃಹಿಣಿ, ಕೊಂಕಟ್ಟೆ ವಠಾರ, ಕೆಂಚನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ. - **ವಿರುದ್ಧ**

**ಎದುರುದಾರರು** : ತಹಶೀಲ್ದಾರ್ ರವರು ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರ್ ರವರ ಕಾರ್ಯಾಲಯ, ದಾವಣಗೆರೆ,

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟಿಸ್**

ಅರ್ಜಿದಾರರ ತಾಯಿಯಾದ ಮೃತ ಶ್ರೀಮತಿ ಮಹಾದೇವಮ್ಮ ಕೋಂ ಲೇಟ್ ಚಿಕ್ರಪ್ಪ ಇವರು ದಿನಾಂಕ:01.07.1968 ರಂದು ಅರ್ಜಿದಾರರ ತವರು ಮನೆಯಾದ ದಾವಣಗೆರೆ ತಾಲ್ಲೂಕು ರಾಂಪುರ ಗ್ರಾಮ ಸ್ವಗೃಹದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೇಲ್ಕಂಡ ಪ್ರಕರಣದಲ್ಲಿ ನನ್ನ ತಾಯಿಯ ಮರಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ: 25.11.2024ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕ ಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 14.10.2024ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**ಹೆಚ್.ಎಸ್. ಬಸವರಾಜ**, ವಕೀಲರು, 2ನೇ ಮೇನ್, 2ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ - 02. 86180 94556

**ಶಿರಸ್ತೇದಾರರು**
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯ, ದಾವಣಗೆರೆ.

**ಮಾನ್ಯ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಘನ ನ್ಯಾಯಾಲಯ, ದಾವಣಗೆರೆ.**

**Com. OS No. 03 / 2024**

ವಾದಿ : **ಕೆನರಾ ಬ್ಯಾಂಕ್**, ಹಳೇ ಪಿ ಬಿ ರಸ್ತೆ ಶಾಖೆ, ದಾವಣಗೆರೆ - ವಿರುದ್ಧ
ಪ್ರತಿವಾದಿ : ಶ್ರೀಮತಿ ಯಶೋಧ ಎಂ.
ಪ್ರತಿವಾದಿ : **ಶ್ರೀಮತಿ ಯಶೋಧ ಎಂ.** ಕೋಂ ಸಂತೋಷ್, ಬಿನ್ ಮಂಜಪ್ಪ, ವಯಸ್ಸು : ಸುಮಾರು 28 ವರ್ಷಗಳು, ಮಾಲೀಕರು : ಶ್ರೀ ಚಾಮುಂಡೇಶ್ವರಿ ಇಂಜಿನಿಯರಿಂಗ್ ವರ್ಕ್ ಶಾಪ್, ವಾಸ : # 135, ಗೋಶಾಲೆ ಅವರಗೆರೆ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಸಿ.ಪಿ.ಸಿ. ಆದೇಶ 5 ನಿಯಮ 20 ರ ಅಡಿಯಲ್ಲಿ ಪ್ರತಿವಾದಿಗೆ ನೀಡಲಾದ ಪ್ರಕಟಣಾ ನೋಟೀಸ್ :-**


ವಾದಿಯು ನಿಮ್ಮಿಂದ ಬರಬೇಕಾದ ಬಾಕಿ ಸಾಲದ ಹಣ ರೂ.10,63,265=92 ಗಳ ಮತ್ತು ಬಡ್ಡಿ ಹಾಗೂ ಇತರೇ ಖರ್ಚುಗಳ ವಸೂಲಿಗಾಗಿ ನಿಮ್ಮ ವಿರುದ್ದ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ನೀವು ಹಾಜರಾಗದೇ ಗೈರು ಇರುವುದರಿಂದ ನಿಮಗೆ ಈ ಮೂಲಕ ನೋಟೀಸ್‌ನ್ನು ಜಾರಿ ಮಾಡಲಾಗಿದೆ. ಸದರಿ ಪ್ರಕರಣವು ದಿನಾಂಕ : 29-11-2024 ರಂದು ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ವಿಚಾರಣೆಗೆ ಇದ್ದು, ಸದರಿ ದಿನಾಂಕದಂದು ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕವಾಗಲಿ ಪ್ರಕರಣದಲ್ಲಿ ಹಾಜರಾಗಿ ನಿಮ್ಮ ತಕರಾರುಗಳು ಇದ್ದಲ್ಲಿ ಸಲ್ಲಿಸಬಹುದು. ಇದಕ್ಕೆ ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮೇಲ್ಕಂಡ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 16-10-2024 ಕೊಡಲ್ಪಟ್ಟಿದೆ.

ವಾದಿ ಪರ ವಕೀಲರು
**ಎನ್.ಕರಿಬಸಪ್ಪ** ವಕೀಲರು, ನಂ.506/1, ಕಾಯಿಪೇಟೆ. ಶ್ರೀ ಬಸವೇಶ್ವರ ದೇವಸ್ಥಾನ ಪಕ್ಕ. ದಾವಣಗೆರೆ - 577001.

ನ್ಯಾಯಾಲಯದ ಆದೇಶದ ಮೇರೆಗೆ,
**ಸಹಿ/- ಮುಖ್ಯ ಆಡಳಿತಾಧಿಕಾರಿಗಳು,**
ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.

# ಮರೆಯದ ಮಾಣಿಕ್ಯ ಆದಿ ಕವಿ ಮಹರ್ಷಿ ವಾಲ್ಮೀಕಿಯ ಸ್ಮರಣೆ



ಮಹಾತ್ಮರ, ಸಂತರ, ಮಹರ್ಷಿಗಳ ಜೀವನ ಚರಿತ್ರೆ ಬಹಳ ಆಶ್ಚರ್ಯಕರವಾಗಿರುವಂತೆ ಆದಿಕವಿ ಮಹರ್ಷಿ ವಾಲ್ಮೀಕಿ ಜೀವನಗಾಥೆ ಇದೆ. ಈ ಕುರಿತು ಅಧ್ಯಯನ, ಸಂಶೋಧನೆಗಳು ನಡೆಯಬೇಕಾದುದು ಅಗತ್ಯವಾಗಿದೆ. ಅವರ ಬಗ್ಗೆ ಇರುವ ಕಟ್ಟು ಕಥೆಗಳು ವೈಜ್ಞಾನಿಕವಾಗಿ ಸಮರ್ಪಕ ಮಾಹಿತಿ ನೀಡಲಾರವು. ವಾಲ್ಮೀಕಿ ಮಹರ್ಷಿಯ ಜೀವನದಲ್ಲಾದ ಪರಿವರ್ತನೆಗಳು, 'ಮಹಾಕಾವ್ಯ' ರಚನೆಗೆ ಪ್ರೇರಕ ಶಕ್ತಿಗಳಾದವು. ವಾಲ್ಮೀಕಿ ಎಲ್ಲಾ ಸಮುದಾಯಕ್ಕೆ ಪ್ರಿಯವಾಗುವ ಆದಿಕವಿ, ಮರೆಯದ ಮಾಣಿಕ್ಯ. ಮಹರ್ಷಿ ಯಾವುದೇ ರಾಜಾಶ್ರಯವನ್ನು ಬಯಸದೇ, ತನ್ನ ಆಶ್ರಮದಲ್ಲಿಯೇ ಅನೇಕ ಋಷಿಗಳಿಗೆ ಆಶ್ರಯ ನೀಡಿದ್ದುಂಟು. ದೇಶಾದ್ಯಂತ ಪರ್ಯಟನೆ ಮಾಡಿದ ಮಹಾನ್ ಪುರುಷ. ಅವರ ಭಕ್ತಿ ಕಾವ್ಯಕ್ಕೆ ಶಕ್ತಿಯಾಗಿದೆ.

**ಮಹರ್ಷಿ ವಾಲ್ಮೀಕಿಯ ಹಿನ್ನೆಲೆ :** ಕ್ಷತ್ರಿಯ ಕುಲಸ್ಥರು ನಾಡನ್ನು ತೊರೆದು ಕಾಡನ್ನು ಸೇರಿದ ಕಥೆಗಳು ಹಲವು. ಕಾಡು ಸೇರಿದವರು ಬೇಡರಾದರು. ಅವರಲ್ಲಿ ನಾಯಕತ್ವ ಗುಣಹೊಂದಿದ್ದ 'ಪ್ರಾಚೇತಸ' ಪತ್ನಿ ಮಾನಿಷ ಈ ದಂಪತಿಗೆ ಜನಿಸಿದ ಮಗು ರತ್ನಾಕರ. ಈತನೇ ಮುಂದೆ ಜಗದ್ವಿಖ್ಯಾತಿ ಪಡೆದ ಕವಿಯಾದ. ವಾಲ್ಮೀಕಿ ಮಹರ್ಷಿಯಾದ. ಈತನಿಗೆ 'ಸನಾತನೆ' ಎಂಬ ಪತ್ನಿ, ಮಕ್ಕಳು ಇದ್ದರು. 'ರಾಮಾಯಣ' ಮಹಾಕಾವ್ಯವನ್ನು ರಚಿಸಿ 2000 ವರ್ಷಗಳ ನಂತರವೂ ರಾಮ, ಸೀತೆ, ಲಕ್ಷ್ಮಣ, ಆಂಜನೇಯ, ಜನರ ಮನಸ್ಸಿನಲ್ಲಿ ಉಳಿಯುವ ಶಾಶ್ವತ ಕಾರ್ಯ ಮಾಡಿದ ಕೀರ್ತಿ ವಾಲ್ಮೀಕಿಯದ್ದು. 'ರಾಮಾಯಣ ಮಹಾಕಾವ್ಯ' ಬರೆಯದೇ ಹೋಗಿದ್ದರೆ ಹೇಗಿದ್ದಿತು? ವಾಲ್ಮೀಕಿ ರಾಮಾಯಣ ಆಧಾರವಾಗಿಟ್ಟುಕೊಂಡು ನೂರಾರು ರಾಮಾಯಣಗಳು ರಚನೆಯಾದವು. ಕುವೆಂಪು ಬರೆದದ್ದು ವಾಲ್ಮೀಕಿ ರಾಮಾಯಣ ದರ್ಶನಂ ಆಗಿದೆ.

**ರಾಮಾಯಣ ಮಹಾಕಾವ್ಯ ರಚಿಸಿದ್ದು ವಾಲ್ಮೀಕಿ :** ಆದಿ ಕವಿ ಮಹರ್ಷಿ ವಾಲ್ಮೀಕಿ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಐದು ನೂರು ಸರ್ಗಗಳಿಂದಲೂ, ಆರು ಕಾಂಡಗಳಿಂದಲೂ ಶ್ರೀರಾಮಾಯಣ ಮಹಾಕಾವ್ಯವನ್ನು ರಚಿಸಿದ್ದು ಭಾರತೀಯರು ಹೆಮ್ಮೆಪಡುವ ಸಂಗತಿ. ಒಬ್ಬ ಸಾಮಾನ್ಯ 'ವ್ಯಾಧ' ಜೀವನದಲ್ಲಿ ಋಷಿ ಮಹಾತ್ಮ ರಿಂದ, ಧ್ಯಾನ, ತಪಸ್ಸಿನಿಂದ ಪರಿವರ್ತನೆಗೊಂಡು 'ಮಹಾಕಾವ್ಯ ರಚನೆ' ಒಂದೆಡೆಯಾದರೆ, ವಾಲ್ಮೀಕಿಯ ವ್ಯಕ್ತಿಗತ ಬದುಕು, ಸಾತ್ವಿಕತೆ, ಜ್ಞಾನ, ತಪಸ್ಸು ಕುರಿತಾದ ಸಂಗತಿಗಳು ಹಲವು. ವಾಲ್ಮೀಕಿ ಕಾಲದ ಬಗ್ಗೆ ಭಿನ್ನತೆಗಳಿವೆ. ಕ್ರಿ.ಪೂ 3 ರಿಂದ 5ನೇ ಶತಮಾನದಲ್ಲಿ ವಾಲ್ಮೀಕಿ ರಾಮಾಯಣ ರಚಿಸಿರಬೇಕೆಂಬುದು ತಜ್ಞರ ಅಭಿಪ್ರಾಯ. ರಾಮಾಯಣಕ್ಕೆ ಒಂದು ಪ್ರತ್ಯೇಕತೆ ಇದೆ. ಇದು ರಾಜರ, ರಾಜ್ಯಭಾರದ ಕಥೆಯೂ ಆಗಿರುವುದರಿಂದ ರಾಜಸತ್ತೆಯ ಏಳು-ಬೀಳುಗಳನ್ನು ಚರ್ಚೆಗಿಡುವ ಮಹತ್ವದ ಕಥನವೂ ಆಗಿದೆ.

**ಮಹಾಕಾವ್ಯದಲ್ಲಿ ಸಾಹಿತ್ಯದ ಚೆಲುವು :** ಮನುಷ್ಯ ಸ್ವಭಾವದ ಸಹಜ ಚಿತ್ರಣವಿದೆ. ವಿವೇಕದಿಂದ ಉತ್ತಮ ಚಾರಿತ್ರ್ಯ ನಿರ್ಮಾಣ ಹೇಗೆಂಬ ಪ್ರತಿಪಾದನೆ ಇದೆ. ಕಾವ್ಯಾಲಂಕಾರ ಒಂದು ಶಾಸ್ತ್ರವಾಗಿ ಬೆಳೆಯದಿದ್ದ ಕಾಲದಲ್ಲಿ ಕಾವ್ಯದ ಲಕ್ಷಣ ಕಾಣಲು ರಾಮಾಯಣದಲ್ಲಿ ಸಾಧ್ಯವಾಗಿದೆ. ಗಾಯನದ ಸೌಂದರ್ಯ, ಸಾಹಿತ್ಯದ ಚೆಲುವು, ಪ್ರಶಂಸೆಗೊಂಡಿದೆ. ಶ್ಲೋಕಗಳೆಲ್ಲ ಕಿರಿದಾಗಿದ್ದು ಸರಳ ರೀತಿಯಲ್ಲಿ ವಾಕ್ಯಗಳ ರಚನೆ, ಶಬ್ದ ರಚನೆ ರಮಣೀಯ. ವಾಚ್ಯಕ್ಕೆ ಮೀರಿದ ಅರ್ಥ ಸ್ವಾರಸ್ಯ, ವಾಲ್ಮೀಕಿಯ ಕಾವ್ಯ ಶಕ್ತಿಯು ಮನೋಹರವಾದದ್ದು. 'ರಾಮಾಯಣವು' ಶೃಂಗಾರ, ಕರುಣ, ಹಾಸ್ಯ, ರೌದ್ರ, ಭಯಾನಕ, ವೀರ, ಮೊದಲಾದ ರಸಗಳು ಇರುವಂತೆ ರಚನೆಗೊಂಡಿದೆ. ಬಾಲಕಾಂಡ, ಅಯೋಧ್ಯಕಾಂಡ, ಅರಣ್ಯಕಾಂಡ, ಕಿಷ್ಕಿಂದ ಕಾಂಡ, ಸುಂದರಕಾಂಡ, ಮತ್ತು ಯುದ್ಧಕಾಂಡಗಳೆಂಬ ಆರು ಕಾಂಡಗಳನ್ನು 'ಮಹಾಕಾವ್ಯ' ಒಳಗೊಂಡಿದೆ.

**ಸೀತಾದೇವಿಗೆ ಉಪಚಾರಗೈದ ವಾಲ್ಮೀಕಿ :** ಶ್ರೀರಾಮನ ಆಜ್ಞೆಯಂತೆ ಸೀತೆ ಅಗ್ನಿ ಪ್ರವೇಶ ಮಾಡಿ, ತನ್ನ ಪಾತಿವ್ರತ್ಯವನ್ನು ರುಜುವಾತುಪಡಿಸಿದ್ದರೂ, ದಂಪತಿಗಳು ಬಹುಕಾಲ ಸುಖದಿಂದ ಇರಲಾಗಲಿಲ್ಲ. ಭದ್ರ ಎಂಬ ಅಗಸನೊಬ್ಬನ ಚಾಡಿ ಮಾತಿನಿಂದ ನೊಂದ ಶ್ರೀರಾಮ ಗರ್ಭವತಿಯಾದ ಸೀತೆಯನ್ನು ಮತ್ತೆ ಕಾಡಿಗೆ ಕಳುಹಿಸಿಬಿಟ್ಟನು. ಅರಣ್ಯದಲ್ಲಿ ಗೋಳಾಡುತ್ತಾ ಕುಳಿತ ಸೀತೆಯನ್ನು ವಾಲ್ಮೀಕಿ ಸಂತೈಸಿ, ತನ್ನ ಆಶ್ರಮಕ್ಕೆ ಕರೆತಂದು, ಋಷಿ ಪತ್ನಿಯರ ಆರೈಕೆಗೆ ಒಪ್ಪಿಸಿದನು. ಕಾಲಾನಂತರ ಸೀತೆಯು ಅವಳಿ ಪುತ್ರರಿಗೆ ಜನ್ಮವಿತ್ತಳು. ಅವರಿಗೆ ಲವ-ಕುಶರೆಂದು ವಾಲ್ಮೀಕಿ ನಾಮಕರಣ ಮಾಡಿದರು. ಶ್ರೀರಾಮನ ಧರ್ಮಪತ್ನಿ, ದಶರಥ ರಾಜನ ಸೊಸೆ, ಜನಕರಾಜನ ಮಗಳು, ನಿರ್ದೋಷಿ, ಸಾಧ್ವಿ, ಪತಿವ್ರತೆಯಾದ ಸೀತೆ ಕಾಡಿನಲ್ಲಿ ಅನುಭವಿಸಿದ ಸಂಕಷ್ಟಗಳು ಅಪಾರ. ಮಹರ್ಷಿ ವಾಲ್ಮೀಕಿಯ ಸಾಂತ್ವನ, ಆಶ್ರಮದ ಆಶ್ರಯದಿಂದ 'ಸೀತೆ' ಮನೋಬಲ ಪಡೆದು ಶಾಂತಳಾಗಿ ಜೀವನ ಕಳೆದಳು.

**ಲವ-ಕುಶರಿಗೆ ವಿದ್ಯಾಗುರು ವಾಲ್ಮೀಕಿ :** ಪರಮ ನಿರ್ಲಿಪ್ತ ಯೋಗಿ ಮಹರ್ಷಿ ವಾಲ್ಮೀಕಿ ಸೀತಾ ಮಾತೆಗೆ ಜನಿಸಿದ ಅವಳಿ ಮಕ್ಕಳಿಗೆ ಲವಕುಶ ಎಂದು ನಾಮಕರಣ ಮಾಡಿ ಅಕ್ಷರಭ್ಯಾಸ, ಉಪನಯಾನಾದಿ ಸಂಸ್ಕಾರಗಳನ್ನು ಕೊಟ್ಟು, ವೇದ ಸ್ಮೃತಿಗಳನ್ನು ಬೋಧಿಸಿ, ಧನುರ್ವಿದ್ಯೆಯಲ್ಲಿ ಪಾರಂಗತರನ್ನಾಗಿ ಮಾಡಿದನು. ರಾಮಾಯಣ ಮಹಾಕಾವ್ಯವನ್ನು ಲವ-ಕುಶರಿಂದಲೇ ಓದಿಸಿ, ಹಾಡಿಸುವ ಸುದಿನವೂ ಬಂದಿತು.

ಶ್ರೀರಾಮನಿಗೆ ಬಹುಕಾಲದ ನಂತರ ಲವ-ಕುಶರು ನಿನ್ನ ಮಕ್ಕಳೇ ಎಂದು ಪರಿಚಯಿಸಿದವರು ವಾಲ್ಮೀಕಿ. ಸೀತಾ ದೇವಿಯನ್ನು ಸುದೀರ್ಘಕಾಲ ಆರೈಕೆ ಮಾಡಿದ ತಂದೆ ಸ್ವರೂಪಿ ವಾಲ್ಮೀಕಿ. ಲವ-ಕುಶರಿಗೆ ವಿದ್ಯೆ ಕಲಿಸಿದ ಗುರು ವಾಲ್ಮೀಕಿ. ಸೀತೆಯನ್ನು 'ವಜ್ರಾದಪಿ ಕಡೋರಾನಿ ಮೃದೂನಿ ಕುಸುಮಾದಪಿ' ಎಂಬಂತೆ ಚಿತ್ರಿಸಿ ರಾಮ-ಸೀತೆ ಮತ್ತು ಮಕ್ಕಳನ್ನು ಒಂದು ಮಾಡಿ ಪುನಃ ಅಯೋಧ್ಯೆಗೆ ಹೋಗಿ ಸುಖದಿಂದ ಬಾಳಿ ಎಂದು ಹಾರೈಸಿದವರು ಮಹರ್ಷಿ ವಾಲ್ಮೀಕಿ.

**ವಾಲ್ಮೀಕಿಯ ವ್ಯಕ್ತಿತ್ವ ಅನನ್ಯವಾದುದು :** ಪರಿಶುದ್ಧ ಭಕ್ತಿ, ಶ್ರದ್ಧೆ, ಮನುಷ್ಯನನ್ನು ಎಷ್ಟು ಉತ್ಕಟರಾಗಿ ಸಂಸ್ಕರಿಸಬಲ್ಲದು. ಪ್ರಯತ್ನ, ಚಿಂತನೆ ಎಂಬ ಕಿರು ಹಣತೆಯನ್ನು ಬೆಳಗಿಸಿಕೊಂಡು ಆದಿಕವಿ ವಾಲ್ಮೀಕಿ ರಾಮಾಯಣವೆಂಬ ಮಹಾಕಾವ್ಯವನ್ನು ರಚಿಸಿ, ರಾಮ-ಸೀತೆಯರಷ್ಟೇ ಪೂಜ್ಯರಾಗಿ ಹೋದರು. ಮಹರ್ಷಿಯ ವಿಶ್ಲೇಷಣಾ ಸಾಮರ್ಥ್ಯ, ನಿರೂಪಣೆಯಲ್ಲಿ, ಆಯಾ ಪಾತ್ರದೊಂದಿಗೆ ಅವರ ತಾದಾತ್ಮ್ಯ, ಗುಣಪಕ್ಷಪಾತ ಇವು ಅನನ್ಯವಾದವು. ಅಡವಿಯಲ್ಲಿ ಅಧ್ಯಾತ್ಮ ಮತ್ತು ಪ್ರಕೃತಿಗಳ ಮಿಲನ, ದುಷ್ಟರ ಮೇಲೆ ಶಿಷ್ಟರ ದಿಗ್ವಿಜಯಗಳು, ಸತ್ಯದ ಸಂಗತಿಗಳು ಆಶ್ಚರ್ಯ ಮೂಡಿಸುತ್ತವೆ. ಆದಿಕವಿ ಜಗತ್ತಿಗೆ ಒಳಿತನ್ನಲ್ಲದೇ ಬೇರೆ ಏನನ್ನೂ ಬಯಸಿಲ್ಲವೆಂಬುದು ಸತ್ಯ ಸಂಗತಿಯಾಗಿದೆ. ಜಗತ್ತಿನಲ್ಲಿ ಕಷ್ಟ-ಸುಖಗಳು, ಸಂಬಂಧಗಳು, ವಿಯೋಗಗಳು ಶಾಶ್ವತವಲ್ಲ. ಸಾವು ಮತ್ತು ವಿಯೋಗ ವ್ಯಥೆಗಳೇ ಎಲ್ಲಾ ಸೌಭಾಗ್ಯಗಳ ಅಂತ್ಯ ಎಂಬ ಸಂದೇಶವನ್ನು ರಾಮಾಯಣವೆಂಬ ಮಹಾಕಾವ್ಯದ ಮೂಲಕ ವಾಲ್ಮೀಕಿ ವ್ಯಕ್ತಪಡಿಸಿರುವುದು ಅವರ ವ್ಯಕ್ತಿತ್ವಕ್ಕೆ ಮೆರಗು ನೀಡುವಂತಿದೆ. ಎಲ್ಲಿ 'ರಾಮನೋ', ಅಲ್ಲಿ 'ಹನುಮನು' ಎಂಬಂತೆ ಎಲ್ಲಿ 'ರಾಮನೋ' ಅಲ್ಲಿ 'ವಾಲ್ಮೀಕಿ'ಯೂ ಇರುತ್ತಾರೆ.

**ಲೋಕ ಸಂಚಾರಿಯಾದ ವಾಲ್ಮೀಕಿ ಮಹರ್ಷಿ :** ಆದಿ ಕವಿ ಮಹರ್ಷಿ ವಾಲ್ಮೀಕಿ ದೇಶಾದ್ಯಂತ ಸಂಚರಿಸಿದ್ದರೆಂಬ ಮಾಹಿತಿಗಳಿವೆ. ಅವರು ತಮ್ಮ ಪತ್ನಿ 'ಸನಾತನಿ' ಹಾಗೂ ಶಿಷ್ಯಗಣದೊಂದಿಗೆ ಪರ್ಯಟಿಸುತ್ತಾ, ಕಾಶಿಯ ಗಂಗಾ ತೀರದಲ್ಲಿ ಅವರು ಪರ್ಣಕುಟೀರವೊಂದನ್ನು ನಿರ್ಮಿಸಿಕೊಂಡು ಅನೇಕ ದಿನಗಳು ಕಳೆದದ್ದುಂಟು. 'ರಾಮಾಯಣ ಮಹಾಕಾವ್ಯ'ವನ್ನು 'ಗಾನ ಸುಧಾಮೃತವಾಗಿಸಿ' ಜನರಿಗೆ ತಿಳಿಸುತ್ತಾ ಉಜ್ಜಯನಿಯಲ್ಲೂ ತಂಗಿದ್ದರು ಎಂಬುದಕ್ಕೆ ಪುರಾವೆಗಳಿವೆ. ರಾಮೇಶ್ವರ, ಕರ್ನಾಟಕದ ಚಿತ್ರದುರ್ಗ ಪರಿಸರದಲ್ಲಿ ಹೀಗೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹಾಗೂ ದೇಶಾದ್ಯಂತ ಕೆಲವು ಸ್ಥಳಗಳಿಗೆ ಮಹರ್ಷಿ ವಾಲ್ಮೀಕಿ ತನ್ನ ಅಕ್ಷಯ ಭಕ್ತಿ ಕಾವ್ಯ ಭಂಡಾರವನ್ನು ಹಂಚುತ್ತಾ ದೇಶ ಪರ್ಯಟನೆ ಮಾಡಿದ ಕೀರ್ತಿ ವಾಲ್ಮೀಕಿಯದು.

**ವಾಲ್ಮೀಕಿಯ ಐಕ್ಯ ವಲ್ಮೀಕದಲ್ಲಿ :** ಋಷಿ ಮುನಿಗಳ ಸಂಸ್ಕಾರಯುತ ಮಾತುಗಳಿಂದ ಪ್ರೇರಣೆ ಪಡೆದು ಬದುಕಿನ ಕೆಟ್ಟ ಕಾರ್ಯಗಳಿಗೆ ಜಂಜಾಟಗಳಿಗೆ ವಿದಾಯ ಹೇಳಿ ಏಕಾಗ್ರತೆ, ಸಾಧನೆಗಾಗಿ ತಪಸ್ಸಿನಲ್ಲಿ ಕುಳಿತ ವಾಲ್ಮೀಕಿಯ ಸುತ್ತ ಹುತ್ತವೇ ಬೆಳೆದಿತ್ತು. ಈ ಹುತ್ತದಿಂದ ಹೊರಗೆ ಬಂದ ದಿನವೇ ಸೀಗೆ ಹುಣ್ಣಿಮೆ ಎಂಬ ಮಾಹಿತಿ ತಮಗೆಲ್ಲಾ ತಿಳಿದಿದ್ದರೂ, ವಾಲ್ಮೀಕಿಯ ಕೊನೆ ದಿನಗಳು, ದೇಶ ಪರ್ಯಟನೆ, ನಂತರ ಐದು ವರ್ಷಗಳು ತಪಸ್ಸನ್ನಾಚರಿಸಿದ ಮಾಹಿತಿಗಳಿವೆ. ತಮ್ಮ ಗ್ರಂಥ ಸಂಪತ್ತನ್ನು 'ಭಾರದ್ವಾಜ್' ಮುನಿಗಳಿಗೆ ಒಪ್ಪಿಸಿ, ಸೀತಾ ವನದಲ್ಲಿ ಏಕಾಂಗಿಯಾಗಲು ನಿರ್ಧರಿಸಿದರು. ಸುದೀರ್ಘ ಕಾಲ ತಪಸ್ಸು ಮಾಡಿ ಪುನಃ ವಲ್ಮೀಕದಲ್ಲಿಯೇ ಐಕ್ಯಗೊಂಡಿದ್ದು ಒಂದು ವಿಶೇಷವಾಗಿದೆ.

**ವಾಲ್ಮೀಕಿ ಸಮಾಜ ಹಾಗೂ ಗುರುಗಳು :** ವಾಲ್ಮೀಕಿ ಸಮಾಜವನ್ನು ನಾಯಕ, ಬೋಯ, ರಾಯ, ಪಾಳೇಗಾರ, ಬೇಡರು ಎಂದು ಕರೆಯುತ್ತಾರೆ. ಈ ಸಮಾಜದಲ್ಲಿ ಮೂರು ವಂಶಗಳಿವೆ. ಸೂರ್ಯವಂಶ ಇದರಲ್ಲಿ 13 ಗೋತ್ರಗಳು, ಚಂದ್ರವಂಶದಲ್ಲಿ 9 ಗೋತ್ರಗಳು, ನಕ್ಷತ್ರ ವಂಶದಲ್ಲಿ ವಾಲ್ಮೀಕಿ ಗೋತ್ರ ಮಾತ್ರ ಇದೆ. ಗೋತ್ರಗಳು ತಮ್ಮ ಪೂರ್ವಜರ ನಂಟು, ಸಂಬಂಧ, ಆಚಾರ-ವಿಚಾರ ತಿಳಿಸುತ್ತವೆ. 1938ರಲ್ಲಿ ಪಾವಗಡದ ರಂಗನಾಯಕರು 'ವಾಲ್ಮೀಕಿ ವಂಶ ಪಾವನಿ' ಎಂಬ ಕೃತಿ ರಚಿಸಿ, ಜನಾಂಗದ ಗೋತ್ರಗಳನ್ನು ದಾಖಲಿಸಿದ್ದಾರೆ. ಡಾ. ಕೃಷ್ಣಮೂರ್ತಿ ಹನೂರ್‌ರವರು 'ಮ್ಯಾಸಬೇಡರ ಸಂಸ್ಕೃತಿ' ಎಂಬ ಕೃತಿಯಲ್ಲಿ ನಾಯಕ ಜನಾಂಗದ ಸಂಬಂಧಗಳನ್ನು ವಿವರಿಸಿದ್ದಾರೆ.

ಈ ಜನಾಂಗಕ್ಕೆ ಬಳ್ಳಾರಿ ಜಿಲ್ಲೆಯ ಅಲ್ಲಿಪುರದಲ್ಲಿ ವಾಲ್ಮೀಕಿ ಗುರುಕುಲಾಶ್ರಮದ ಶ್ರೀ ಸಿದ್ಧಾರ್ಥಾನಂದ ಸ್ವಾಮೀಜಿ ಪ್ರಥಮ ಗುರುಗಳಾದರು. ರೋಣ ತಾಲ್ಲೂಕಿನ ಸೂಡಿ ಗ್ರಾಮದ ಯತಿರಾಜ ಪರಮ ಹಂಸರು ಮಠ ಕಟ್ಟಿದರು. ಚಳ್ಳಕೆರೆಯ ಹಾರುವನಹಳ್ಳಿಯಲ್ಲಿ ಮಠದ ಶಾಖೆ ಆರಂಭಿಸಿದರು. 1997ರಲ್ಲಿ ಬೆಂಗಳೂರಿನಲ್ಲಿ ಕಣ್ಣಪ್ಪ ಟ್ರಸ್ಟ್‌ನಿಂದ ಗುರುಪೀಠ ಆರಂಭಿಸಿ, ಸತ್ಯಾನಂದ ಪುರಿ ಸ್ವಾಮಿಗಳನ್ನು ಗುರುಗಳಾಗಿ ಆಯ್ಕೆ ಮಾಡಿದರು. 1998 ರಲ್ಲಿ ಹರಿಹರ ತಾಲ್ಲೂಕಿನ ರಾಜನಹಳ್ಳಿಯಲ್ಲಿ ವಾಲ್ಮೀಕಿ ಮಠ ಸ್ಥಾಪನೆಯಾಗಿ ಶ್ರೀ ಪುಣ್ಯಾನಂದ ಪುರಿ ಸ್ವಾಮಿಗಳು ನೇಮಕವಾದರು. ಅವರ ನಂತರ ಈಗ ಶ್ರೀ ಜಗದ್ಗುರು ಪ್ರಸನ್ನಾನಂದ ಸ್ವಾಮೀಜಿ ಗುರುಪೀಠದಲ್ಲಿದ್ದಾರೆ. ರಾಜ್ಯದಲ್ಲಿ ಈ ಜನಾಂಗ 60 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಜನಾಂಗ ಸದಾ ಸ್ಮರಿಸುವ ಮಹಾನ್ ವ್ಯಕ್ತಿಗಳೆಂದರೆ ವಾಲ್ಮೀಕಿ, ಏಕಲವ್ಯ, ಬೇಡರಕಣ್ಣಪ್ಪ, ಶಬರಿ, ಕುಮಾರರಾಮ, ಹರಿಹರ-ಬುಕ್ಕರಾಯ, ಮದಕರಿ ನಾಯಕರು, ಶಿವಪ್ಪನಾಯಕ, ಸಿಂಧೂರಲಕ್ಷ್ಮಣ, ಕೆಳದಿ ಚನ್ನಮ್ಮ, ವೆಂಕಟಪ್ಪ ನಾಯಕ, ಇಮ್ಮಡಿ ಪುಲಕೇಶಿ, ಕಂಪಿಲರಾಯರು ಮುಂತಾದವರು.

**ಮಹರ್ಷಿ ವಾಲ್ಮೀಕಿ ಕುರಿತು ಸಂಶೋಧನೆ :** ಒಟ್ಟಾರೆ ಆದಿಕವಿ ಮಹರ್ಷಿ ವಾಲ್ಮೀಕಿಯ ಕುರಿತಾಗಿ ನಮ್ಮ ವಿಶ್ವವಿದ್ಯಾನಿಲಯಗಳು ಅಧ್ಯಯನ ಮತ್ತು ಸಂಶೋಧನೆಗಳಿಗೆ ಮಹತ್ವ ನೀಡಿ, ವಾಲ್ಮೀಕಿಯ ನಿಜ ಜೀವನದ ಸ್ವರೂಪ, ಕಾಳಜಿಯನ್ನರಿತು ವಾಲ್ಮೀಕಿಯನ್ನು ದಂತ ಕಥೆಗಳಿಂದ ಮುಕ್ತಗೊಳಿಸಬೇಕಾಗಿದೆ. ವಾಲ್ಮೀಕಿ ಮಹರ್ಷಿಯ ವ್ಯಕ್ತಿತ್ವದ ಪರಿಚಯ ಮುಂದಿನ ಜನಾಂಗಕ್ಕೆ ವೈಜ್ಞಾನಿಕವಾಗಿ ಲಭ್ಯವಾಗಬೇಕಾಗಿದೆ. ಈ ದಿಶೆಯಲ್ಲಿ ನಾವೆಲ್ಲ ಚಿಂತನ-ಮಂಥನ ಮಾಡುವ ಸಂದರ್ಭ ಸಮಯೋಚಿತವಾಗಿದೆ ಎಂಬುದು ನನ್ನ ಆಶಯವಾಗಿದೆ.

**- ಡಾ. ಗಂಗಾಧರಯ್ಯ ಹಿರೇಮಠ,**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.
ಮೊ: 98800 93613

# ಹರಿಹರದಲ್ಲಿ ಗೋಡೆ ಕುಸಿದು ಮಗುವಿಗೆ ಗಾಯ



**ಹರಿಹರದಲ್ಲಿ ಮನೆ ಗೋಡೆ ಕುಸಿದ ಪರಿಣಾಮ ತೀವ್ರವಾಗಿ ಗಾಯಗೊಂಡು ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಐದು ವರ್ಷದ ಬಾಲಕಿ ಆಯೇಷಾಳನ್ನು ಭೇಟಿ ಮಾಡಿದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಯೋಗಕ್ಷೇಮ ವಿಚಾರಿಸಿ, ಕುಟುಂಬದವರಿಗೆ ಧೈರ್ಯ ತುಂಬಿ, ಉತ್ತಮ ಚಿಕಿತ್ಸೆಯ ಭರವಸೆ ನೀಡಿದರು.**

**(1ನೇ ಪುಟದಿಂದ)** ಮಾತನಾಡಿ, ನಗರದಲ್ಲಿ ತಡ ರಾತ್ರಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಅನಾಹುತಗಳು ಸಂಭವಿಸಿವೆ. ಇಲ್ಲಿನ ಚಾನೆಲ್ ಮೂಲಕ ಹಾದು ಹೋಗುವ ನೀರು ಕಟ್ಟಿಕೊಂಡು ಮನೆಗಳಿಗೆ ನುಗ್ಗಿದೆ. ಅದನ್ನು ತಡೆಯಲು ತಡೆಗೋಡೆ ನಿರ್ಮಿಸಲು ಸರ್ಕಾರ 1.5 ಕೋಟಿ ರೂ. ಹಣ ಮಂಜೂರು ಮಾಡಿದೆ. ಆದರೆ ಇದುವರೆಗೂ ಕಾಮಗಾರಿ ಮಾಡದೇ ಇರುವುದಕ್ಕೆ ಸ್ಥಳೀಯ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಆದಷ್ಟು ಬೇಗ ತಡೆಗೋಡೆ ನಿರ್ಮಾಣಕ್ಕೆ ಮುಂದಾಗಬೇಕು, ಜೊತೆಗೆ ಗೋಡೆ ಕುಸಿದು ಗಾಯಗೊಂಡಿ ರುವ ಮಗುವಿಗೆ ಚಿಕಿತ್ಸೆ ವೆಚ್ಚ ಭರಿಸಬೇಕು ಮತ್ತು ತಾತ್ಕಾಲಿಕವಾಗಿ ಕಾಳಜಿ ಕೇಂದ್ರ ಗಳನ್ನು ಸ್ಥಾಪಿಸಿ ನಿರಾಶ್ರಿತ ಕುಟುಂಬದವರಿಗೆ ಊಟ ವಸತಿ ಸೌಕರ್ಯ ಒದಗಿಸಲು ತಹಶೀಲ್ದಾರ್ ಮತ್ತು ಪೌರಾಯುಕ್ತರಿಗೆ ಸೂಚಿಸಿರುವುದಾಗಿ ಶಾಸಕರು ಹೇಳಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಕಳೆದ 20 ತಿಂಗಳ ಕೆಳಗೆ ನಗರಸಭೆ ವಿಶೇಷ ಅನುದಾನದಲ್ಲಿ 1.5 ಕೋಟಿ ರೂ. ವೆಚ್ಚದಲ್ಲಿ ತಡೆಗೋಡೆ ನಿರ್ಮಾಣದ ಗುತ್ತಿಗೆ ಟೆಂಡರ್ ಆಗಿದೆ. ಆದರೆ ಹಿಂದೆ ಇದ್ದಂತಹ ಅಧಿಕಾರಿಗಳ ನಿರ್ಲಕ್ಷ್ಯವೋ ಅಥವಾ ಗುತ್ತಿಗೆದಾರರ ನಿರ್ಲಕ್ಷ್ಯವೋ ಕಾಮಗಾರಿ ಆಗಿಲ್ಲ. ನಗರಸಭೆ ಸದಸ್ಯರೂ ಸಹ ಈ ಕೆಲಸವನ್ನು ಮಾಡುವುದಕ್ಕೆ ಅಧಿಕಾರಿಗಳ ಮೇಲೆ ಒತ್ತಡ ಹಾಕಿಲ್ಲ. ಈಗ ಮಳೆ ಬಂದು ಮನೆಗಳಿಗೆ ನೀರು ನುಗ್ಗಿದಾಗ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಹೇಳುತ್ತಾರೆ ಎಂದು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರು ಬಸವರಾಜ್, ನಗರಸಭೆ ಸದಸ್ಯರಾದ ಹನುಮಂತಪ್ಪ, ಬಿ.ಅಲ್ತಾಫ್, ಆರ್.ಸಿ. ಜಾವೇದ್, ಶಾಯಿನಾ ದಾದಾಪೀರ್, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಗಳು ಹಾಗೂ ಇತರರು ಹಾಜರಿದ್ದರು.

# ಹಮಾಸ್ ಉಗ್ರ ಸಂಘಟನೆ ನಾಯಕ ಸಿನ್ವರ್ ಹತ



ಜೆರುಸಲೇಂ, ಅ. 17 – ಕಳೆದ ವರ್ಷ ಇಸ್ರೇಲ್ ಮೇಲೆ ನಡೆಸಲಾದ ದಾಳಿಯ ರೂವಾರಿಯಾಗಿದ್ದ ಹಮಾಸ್ ಉಗ್ರವಾದಿ ಸಂಘಟನೆಯ ನಾಯಕ ಯಾಹ್ಯಾ ಸಿನ್ವರ್ ಹತನಾಗಿರುವುದಾಗಿ ಇಸ್ರೇಲ್ ಸೈನ್ಯ ತಿಳಿಸಿದೆ. ಇಸ್ರೇಲ್ ಮೇಲೆ ನಡೆಸಿದ ದಾಳಿಯು ಸಮರಕ್ಕೆ ಕಾರಣವಾಗಿತ್ತು.

ಇಸ್ರೇಲ್ – ಹಮಾಸ್ ಸಮರ ಆರಂಭವಾದ ನಂತರ, ಸಿನ್ವರ್ ಇಸ್ರೇಲ್ ಪ್ರಮುಖ ಗುರಿಯಾಗಿದ್ದ. ಸಿನ್ವರ್ ಹತ್ಯೆ ಉಗ್ರವಾದಿ ಸಂಘಟನೆಗೆ ದೊಡ್ಡ ಹಿನ್ನಡೆಯಾಗಿದೆ. ಸಿನ್ವರ್ ಸಾವಿನ ಬಗ್ಗೆ ಹಮಾಸ್ ಯಾವುದೇ ಹೇಳಿಕೆ ನೀಡಿಲ್ಲ.

ಬುಧವಾರ ನಡೆದ ದಾಳಿಯಲ್ಲಿ ಮೂವರು ಉಗ್ರರು ಹತರಾಗಿದ್ದರು. ಹತರಲ್ಲಿ ಸಿನ್ವರ್ ಸಹ ಸೇರಿರುವ ಶಂಕೆ ಇತ್ತು. ಇಸ್ರೇಲ್ ಸೈನ್ಯ ಡಿ.ಎನ್.ಎ. ಹಾಗೂ ಇತರೆ ಪರೀಕ್ಷೆ ನಡೆಸಿ, ಸಿನ್ವರ್ ಸಾವನ್ನು ಖಚಿತ ಪಡಿಸಿದೆ.

ಅಕ್ಟೋಬರ್ 7, 2023ರಲ್ಲಿ ಇಸ್ರೇಲ್ ಮೇಲೆ ನಡೆದ ದಾಳಿಯ ರೂವಾರಿಗಳಲ್ಲಿ ಸಿನ್ವರ್ ಪ್ರಮುಖನಾಗಿದ್ದ. ಈತನನ್ನು ಹೊಡೆದುರುಳಿಸುವುದಾಗಿ ಇಸ್ರೇಲ್ ಹೇಳಿತ್ತು. ಹಮಾಸ್ ಉಗ್ರರು ಸಾಮರ್ಥ್ಯ ಹೆಚ್ಚಿಸಿಕೊಳ್ಳುವಲ್ಲಿ ಸಿನ್ವರ್ ಪಾತ್ರ ಪ್ರಮುಖವಾಗಿತ್ತು.

ಬುಧವಾರ ಸಿನ್ವರ್ ಹೋಲುವ ವ್ಯಕ್ತಿಯ ಮೃತದೇಹದ ಚಿತ್ರಗಳು ಆನ್‌ಲೈನ್‌ನಲ್ಲಿ ಹರಿದಾಡಿದ್ದವು. ಸ್ಥಳದಲ್ಲಿದ್ದ ಇಸ್ರೇಲ್ ಭದ್ರತಾ ಅಧಿಕಾರಿಗಳು ಈ ಚಿತ್ರ ತೆಗೆದಿರುವುದನ್ನು ನಂತರ ಖಚಿತ ಪಡಿಸಲಾಗಿತ್ತು.

ಬುಧವಾರ ಆಕಸ್ಮಿಕವಾಗಿ ಸಿನ್ವರ್ ಹತನಾಗಿರುವುದಾಗಿ ಇಸ್ರೇಲ್ ಸುದ್ದಿ ತಾಣವಾದ ಎನ್12 ವರದಿ ಮಾಡಿತ್ತು. ಗಾಜಾದಲ್ಲಿ ಉಗ್ರವಾದಿ ಗುಂಪೊಂದು ಕಟ್ಟಡವೊಂದರಲ್ಲಿ ಇದ್ದದ್ದು ತಿಳಿದು ಬಂದಿತ್ತು. ಆಗ ಇಸ್ರೇಲ್ ಪಡೆಗಳು ದಾಳಿ ನಡೆಸಿದಾಗ ಕಟ್ಟಡ ಕುಸಿದಿತ್ತು. ಈ ದಾಳಿಯಲ್ಲಿ ಹತರಾದವರ ಪೈಕಿ ಸಿನ್ವರ್ ಹೋಲುವ ವ್ಯಕ್ತಿ ಕಂಡು ಬಂದಿದ್ದ.

1980ರಿಂದ 2011ರವರೆಗೆ ಸಿನ್ವರ್ ಇಸ್ರೇಲ್ ಬಂಧನದಲ್ಲಿದ್ದ. ಆ ಸಂದರ್ಭದಲ್ಲಿ ಮೆದುಳು ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲಾಗಿತ್ತು. ಇದರಿಂದಾಗಿ ಸಿನ್ವರ್ ಕುರಿತ ಸಾಕಷ್ಟು ವೈದ್ಯಕೀಯ ದಾಖಲೆಗಳು ಇಸ್ರೇಲ್ ಬಳಿ ಲಭ್ಯವಿದೆ.

ಕಳೆದ ಜುಲೈ ತಿಂಗಳಲ್ಲಿ ಹಮಾಸ್ ನಾಯಕ ಇಸ್ಮಾಯಿಲ್ ಹನಿಯೇಹ್ ಹತನಾಗಿದ್ದ. ನಂತರ ಆ ಸ್ಥಾನಕ್ಕೆ ಸಿನ್ವರ್ ಆಯ್ಕೆ ಮಾಡಲಾಗಿತ್ತು.

ಕಳೆದ ಒಂದು ವಾರದಿಂದ ಇಸ್ರೇಲ್ ಪಡೆಗಳು ಉತ್ತರ ಗಾಜಾದ ಜಬಲಿಯಾ ಗುರಿಯಾಗಿಟ್ಟು ಕೊಂಡು ಕಾರ್ಯಾಚರಣೆ ನಡೆಸುತ್ತಿವೆ.

## ಸಿಜೆಐ ಆಗಿ ಖನ್ನಾ ನೇಮಕಕ್ಕೆ ಶಿಫಾರಸ್ಸು

ನವದೆಹಲಿ, ಅ. 17 - ಸುಪ್ರೀಂ ಕೋರ್ಟ್ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಸಂಜೀವ್ ಖನ್ನಾ ಅವರನ್ನು ನೇಮಿಸುವಂತೆ ಹಾಲಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಶಿಫಾರಸ್ಸು ಮಾಡಿದ್ದಾರೆ.

ನ್ಯಾಯಮೂರ್ತಿ ಚಂದ್ರಚೂಡ್ ನಂತರ ಅತ್ಯಂತ ಹಿರಿಯರಾಗಿರುವ ಸಂಜೀವ್ ಖನ್ನಾ ಅವರನ್ನು ನೇಮಿಸಲು ಕಾನೂನು ಸಚಿವಾಲಯಕ್ಕೆ ಚಂದ್ರಚೂಡ್ ಅವರು ಬುಧವಾರ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನವೆಂಬರ್ 11ರಂದು ನ್ಯಾಯಮೂರ್ತಿ ಖನ್ನಾ ಅವರು ಸುಪ್ರೀಂ ಕೋರ್ಟ್ 51ನೇ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ಅವರು ಮೇ 13, 2025ರಂದು ನಿವೃತ್ತರಾಗಲಿದ್ದಾರೆ. ಅವರ ಕಾಲಾವಧಿ ಆರು ತಿಂಗಳಾಗಿರಲಿದೆ.

## 20 ರಂದು ಉದ್ಯೋಗ ಮೇಳ

ದಾವಣಗೆರೆ, ಅ. 17 - ಎನ್‌ಐಇಎಲ್‌ಟಿ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಸಹಕಾರದೊಂದಿಗೆ ಇದೇ ದಿನಾಂಕ 20 ರಂದು ಕೆವಿಎಲ್‌ಎಫ್ ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, #1040, 28ನೇ ಕ್ರಾಸ್ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು ಇಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಈ ಉದ್ಯೋಗ ಮೇಳಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 100ಕ್ಕೂ ಹೆಚ್ಚಿನ ಪ್ರತಿಷ್ಠಿತ ಬೃಹತ್, ಮಧ್ಯಮ ಹಾಗೂ ಸಣ್ಣ ಉದ್ಯೋಗ ದಾತರ ಸಂಸ್ಥೆಗಳು ಭಾಗವಹಿಸಲಿವೆ. ಆಸಕ್ತ ಅಭ್ಯರ್ಥಿಗಳು http://job-fair.callcut.nielit.in/ ಆನ್‌ಲೈನ್ ಮೂಲಕ ಅಥವಾ ಕ್ಯೂ.ಆರ್. ಕೋಡ್ ಸ್ಕ್ಯಾನ್ ಮಾಡಿ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದೆಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಶಿವಕುಮಾರ ಮಲ್ಲಾಡದ ತಿಳಿಸಿದ್ದಾರೆ.

## ಹಸೀನಾ ಬಂಧನಕ್ಕೆ ವಾರಂಟ್

ಢಾಕಾ, ಅ. 17 - ಬಾಂಗ್ಲಾದೇಶದ ಮಾಜಿ ಪ್ರಧಾನ ಮಂತ್ರಿ ಶೇಖ್ ಹಸೀನಾ ವಿರುದ್ಧ ಅಲ್ಲಿನ ಅಂತರರಾಷ್ಟ್ರೀಯ ಅಪರಾಧಗಳ ಟ್ರಿಬ್ಯೂನಲ್ ಬಂಧನದ ವಾರಂಟ್ ಹೊರಡಿಸಿದೆ. ಕಳೆದ ಆಗಸ್ಟ್ ತಿಂಗಳಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ಹೋರಾಟ ನಡೆದ ನಂತರ ಹಸೀನಾ ಅವರು ದೇಶದಿಂದ ಪಲಾಯನ ಮಾಡಿದ್ದರು. ಹಸೀನಾ ಅಲ್ಲದೆ ಇನ್ನೂ 45 ಜನರ ವಿರುದ್ಧ ಮಾನವೀಯತೆ ವಿರುದ್ಧ ಅಪರಾಧ ಎಸಗಿದ ಆರೋಪದ ಮೇಲೆ ಪ್ರಕರಣಗಳು ದಾಖಲಾಗಿವೆ.


**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ಹತ್ತಿರ
22 1/2 x40 South,
22 1/2 x40 ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಅಡುಗೆ ಸಹಾಯಕಿ ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಅಡುಗೆ, ಬಟ್ಟೆ ಮತ್ತು ಪಾತ್ರೆ ತೊಳೆಯಲು ಅನುಭವ ಇರುವ ಒಬ್ಬ ಮಹಿಳೆ ಬೇಕಾಗಿದ್ದಾರೆ. ನಿಟ್ಟುವಳ್ಳಿಯಲ್ಲಿರುವವರಿಗೆ ಮೊದಲ ಆದ್ಯತೆ, ಸಮಯ : ಬೆಳಿಗ್ಗೆ 6.30 ರಿಂದ 2, ಸಂಜೆ : 6 ರಿಂದ 8 ರವರೆಗೆ. ಸಂಬಳ 10 ರಿಂದ 12 (ಪ್ರತಿ ತಿಂಗಳು) ಸಂಪರ್ಕಿಸಿ :
99028 24909, 98447 48763

**ಎರಡನೇ ಸಂಬಂಧ ವಧು ಬೇಕಾಗಿದ್ದಾರೆ**
44 ವರ್ಷದ ವರನಿಗೆ ಎರಡನೇ ಸಂಬಂಧ ವಧು ಬೇಕಾಗಿದ್ದಾರೆ.
(ಯಾವುದೇ ಜಾತಿ ಅಭ್ಯಂತರವಿಲ್ಲ)
79754 06965

**ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲಾಟ್ ಲೀಸ್‌ಗೆ ಇವೆ. ಸಂಪರ್ಕಿಸಿ
99807 28533

**ಓಂ ವರಸಿದ್ಧಿ ವಿನಾಯಕ**
MP ದಾವಣಗೆರೆ ಶೈಲಿಯ ಕ್ಲೌಡ್ ಕಿಚನ್ ನಮ್ಮ ಮನೆಯಿಂದಲೇ ಊಟ ತಯಾರಿಸಿ ನೀವು ಇರುವ ಸ್ಥಳಕ್ಕೆ ಕಳಿಸುತ್ತೇವೆ. ಸಂಪರ್ಕಿಸಿ :
+91 91102 74329

**ಪಾನಿಪುರಿ ಅಂಗಡಿಯಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ**
ಬೆಳಿಗ್ಗೆ 7.30 ರಿಂದ ಮಧ್ಯಾಹ್ನ 1.30
ಮೊ. 99166-67888

**ಮನೆಯಲ್ಲಿ ನೀರಿನ ಲೀಕೇಜ್ ವಾಟರ್ ಪ್ರೂಫಿಂಗ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**WANTED**
Receptionist (Male / Female) to work at DTDC Courier Office. Shamanur Davanagere.
Time : 10Am to 8Pm.
Conact :
91486 81600

**ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ
ಸಿಟಿಜನ್ಸ್ ದಾ
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
93421 95459, 82964 65648
90082 24619

**SMS Convent & High School Teacher's Requirment**
Rajeevgandi Badavane, DVG.
B.Sc., D.Ed., B.Ed.,
Primary-01, High school-01
Clerical, Office Work (Any Degree)-01, Spoken English-01
96631 95531, 98861 30657

**ಬೇಕಾಗಿದ್ದಾರೆ**
ಆಟೋ ಮೊಬೈಲ್ಸ್ ಅಂಗಡಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
73380 33337

**Requirement**
Receptionist (only female)
Age: 20-25, Salary: 10000 - 12000
HAIRPOINT SALON
MCC `B' block, 7th main
3rd cross, Davanagere.
9148319342, 9738664400
08192220755

**Manager / Executive**
(Attractive Salary + incentives)
99645 46667
89700 66666

**RACHANA SEQUINS**

ಅತ್ಯುನ್ನತ ಮಾದರಿಯ ಅಪರೂಪದ ಸೀರೆಗಳ ಸಂಗ್ರಹಾಲಯ
#658, Opp. 'Om Shanti',
8th Main, P.J. Extension,
DAVANAGERE
98445 44111
98441 44111

**ಉದ್ಯೋಗಾವಕಾಶ**
ಅಂಗಡಿಯಲ್ಲಿ ಕೆಲಸ ಮಾಡಲು 5 ಜನ ಹುಡುಗರು ಬೇಕಾಗಿದ್ದಾರೆ
ಸಮಯ : ಬೆ. 9 ರಿಂದ ರಾತ್ರಿ 8 ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರೋಡ್, ದಾವಣಗೆರೆ.

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್, ಹೌಸ್ ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ESI, PF ಸೌಕರ್ಯವಿರುತ್ತದೆ.
ಸಂಬಳ : 10000 ರಿಂದ 11000.
96060 50594, 96062 50026

**ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)**
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಶ್ರೀ ಸಾಯಿ ಫೈನಾನ್ಸ್ (ರಿ)**
ಫುಲ್ ಟೈಂ / ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಆಸಕ್ತಿಯಳ್ಳವರು ಸಂಪರ್ಕಿಸಿ.
96860 22969

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop
Davanagere.
89519 38228, 80502 22181

**ತಕ್ಷಣ ಬೇಕಾಗಿದ್ದಾರೆ**
ರಾಜ್‌ಭವನ್ ಬಾರ್ ಅಂಡ್ ರೆಸ್ಟೋರೆಂಟ್, ಹರಿಹರ
● ಸಪ್ಲೈಯರ್
● ಬಿಲ್ಲಿಂಗ್ ಕಂಪ್ಯೂಟರ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
ಸಂಪರ್ಕಿಸಿ :
99726 98591, 94490 37488

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45 ಪೂರ್ವ, ದರ 2,250/-, 20x45 ಪೂರ್ವ, ದರ 2,250/-, 20x30 ಪೂರ್ವ, ದರ 2,150/-, 40x45 ಪೂರ್ವ-ಉತ್ತರ ಕಾರ್ನರ್ ಸೈಟು. ದರ 2,250/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರಾತ್ರಿ ಪಾಳಯದಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಬೇಕಾಗಿದ್ದಾರೆ.
63639 54459

**LEARN PROGRAMMING**
`C' Language,
OOP'S with C++
Niyam Computers
PJ Extn. Davanagere
Call for more Info :
90367 19573

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes +
Study Materials
97398 65711, 94822 44114

**WANTED**
Experienced Male Salesmen for
Exclusive Show Room
Contact us at :
98867 57688

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಬೇಕಾಗಿದ್ದಾರೆ**
ಫೀಲ್ಡ್ ಕೆಲಸಕ್ಕೆ ಜನ ಬೇಕಾಗಿದ್ದಾರೆ.
ಸಂಪರ್ಕಿಸಿ :
90199 76891

**ಮನೆ ಬಾಡಿಗೆಗೆ ಇದೆ**
3 BHK + 1 ಅಟ್ಯಾಚ್ ರೂಂ ಮಹಡಿ ಮೇಲೆ ಹಾಗೂ 3 ಕಾರು ನಿಲ್ಲಿಸಲು ಸ್ಥಳವಿರುವ, ಆಫೀಸು ಅಥವಾ ವಾಸಕ್ಕೆ ಯೋಗ್ಯವಾದ ವಿಶಾಲವಾದ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. 4ನೇ ಮೇನ್, ನಿಟುವಳ್ಳಿ ಹೊಸ ಬಡಾವಣೆ, SBI ಹತ್ತಿರ
94482 01195

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2 ಕೆ.ಜಿ. ಚೀಲಗಳು ರೂ. 25/-
ಸ್ಥಳ : ದೊಡ್ಡಬಾತಿ
90088 00080

**WANTED**
SALES & SERVICE
Royal Automobiles
Kusagur Building,
Shivakumar swamy
Layout, 2nd Stage Hadadi
Road, Davangere-5.
97405 91365

**COMMERCIAL PREMISES FOR RENT**
*Suitable for Showrooms, Banks, Financial Institutions, Jewellers.*
♦ Ground Floor - 1850 Sq. Ft.
♦ First Floor - 2440 Sq. Ft.
♦ Second Floor - 2440 Sq. Ft.
♦ Third Floor - 2440 Sq. Ft.
Opp. Old Bus Stand, P.B. Road, Davangere - 577002.
Mob: 94486 58255

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ಧರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗೆ 18,000 ರೂ. ನಿಂದ 20,000 ರೂ. ಸಂಬಳವಿದೆ. ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**ಶಾಕಿರ ಬ್ಯೂಟಿ ಪಾರ್ಲರ್**
10th main, PJ Extn, Davanagere, ಮನೆ ಕೆಲಸ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
93420 19013

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

# ಎಲಾನ್ ಮಸ್ಕ್ ರೋಬೋಟ್ ನಿಯಂತ್ರಿಸಿದ್ದು ಮನುಷ್ಯರು



## ಟೆಸ್ಲಾ ಕಂಪನಿಯ ಕೃತಕ ಬುದ್ಧಿವಂತಿಕೆ ಸಾಮರ್ಥ್ಯದ ಬಗ್ಗೆ ಈಗ ಸವಾಲು

ನವದೆಹಲಿ, ಅ. 17 - ರೋಬೋಟ್ ಹಾಗೂ ಸ್ವಯಂ ಚಾಲಿತ ಕಾರುಗಳಿಂದಾಗಿ ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಇತ್ತೀಚೆಗೆ ಸಾಕಷ್ಟು ಸುದ್ದಿ ಮಾಡಿದ್ದರು. ರೋಬೋಟ್‌ಗಳು ಔತಣ ಕೂಟದಲ್ಲಿ ಪಾನೀಯಗಳನ್ನು ಸಿದ್ಧಪಡಿಸಿದ್ದು, ಆಟವಾಡಿದ್ದು ಹಾಗೂ ಜನರ ಜೊತೆ ಸಂವಾದ ನಡೆಸಿದ್ದು ಗಮನ ಸೆಳೆದಿತ್ತು.

ಆದರೆ, ಅತಿ ಪ್ರಚಾರ ಪಡೆದ ಆಪ್ಟಿಮಸ್ ರೋಬೋಟ್‌ಗಳನ್ನು ಮನುಷ್ಯರು ರಿಮೋಟ್ ಮೂಲಕ ನಿಯಂತ್ರಿಸಿದ್ದರು ಎಂದು ಬ್ಲೂಮ್‌ಬರ್ಗ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಕೆಲ ಚಟುವಟಿಕೆಗಳನ್ನು ಮನುಷ್ಯರು ರಿಮೋಟ್ ಮೂಲಕ ನಿರ್ವಹಿಸಿದ್ದರು ಎಂದು ವರದಿಗಳು ಹೇಳಿವೆ. ಮಸ್ಕ್ ಅವರ ಟೆಸ್ಲಾ ಕಂಪನಿ ಆಯೋಜಿಸಿದ್ದ ಸೈಬರ್‌ಕ್ಯಾಬ್ ಸಮಾರಂಭದಲ್ಲಿ ರೋಬೋಟ್‌ಗಳ ಕಾರ್ಯ ನಿರ್ವಹಣೆ ನೋಡಿ ಉತ್ಸಾಹಗೊಂಡಿದ್ದವರಿಗೆ, ಈ ವರದಿ ನಿರಾಸೆ ತಂದಿದೆ.

ಕೃತಕ ಬುದ್ಧಿವಂತಿಕೆ ಮೂಲಕ ರೋಬೋಟ್‌ಗಳು ಮನುಷ್ಯರಂತೆ ಕಾರ್ಯನಿರ್ವಹಿಸುವ ಕ್ರಾಂತಿಕಾರಕ ಬೆಳವಣಿಗೆಯಾಗಿದೆ ಎಂದು ಭಾವಿಸಿದ್ದವರು ಮರು ಆಲೋಚಿಸಬೇಕಿದೆ.

ಇದೇ ಸಮಾರಂಭದಲ್ಲಿ ಟೆಸ್ಲಾ ಕಂಪನಿಯು ಸಂಪೂರ್ಣ ಸ್ವಯಂ ಚಾಲಿತ ರೋಬೋಟ್ಯಾಕ್ಸಿ ಕಾರನ್ನು ಪ್ರದರ್ಶಿಸಿತ್ತು. ಆದರೆ, ಈ ಕಾರು ಎಷ್ಟರ ಮಟ್ಟಿಗೆ ಸ್ವಯಂ ಚಾಲಿತ ಎಂಬ ಪ್ರಶ್ನೆಯನ್ನೂ ಮುಂದಿಡಲಾಗುತ್ತಿದೆ. ಈ ಬಗ್ಗೆ ಎಲಾನ್ ಮಸ್ಕ್ ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮಾನವರೂಪಿ ರೋಬೋಟ್‌ಗಳನ್ನು ಪ್ರದರ್ಶಿಸುವ ಮೂಲಕ ಹೂಡಿಕೆದಾರರಿಗೆ ಮುಂಬರುವ ಉತ್ಪನ್ನಗಳ ಬಗ್ಗೆ ಆಸಕ್ತಿ ಮೂಡಿಸುವ ಪ್ರಯತ್ನ ನಡೆಸಲಾಗಿತ್ತು ಎಂದು ಹೇಳಲಾಗುತ್ತಿದೆ. ರೋಬೋಟ್‌ಗಳ ಕೆಲ ಕಾರ್ಯಗಳನ್ನು ಮನುಷ್ಯರು ರಿಮೋಟ್ ಮೂಲಕ ನಿರ್ವಹಿಸಿದ್ದರು ಎಂಬುದು ಹೂಡಿಕೆದಾರರ ಮೇಲೆ ಯಾವ ಪರಿಣಾಮ ಬೀರಲಿದೆ ಎಬುದನ್ನು ಕಾದು ನೋಡಬೇಕಿದೆ.

ಸಂಪೂರ್ಣ ಸ್ವಯಂ ಚಾಲಿತ ಕಾರು ಒಂದೆರಡು ವರ್ಷಗಳಲ್ಲೇ ಬಿಡುಗಡೆಯಾಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಆದರೆ, ಕೃತಕ ಬುದ್ಧಿವಂತಿಕೆ ಕಾರು ಚಲಾಯಿಸಲು ಸಂಪೂರ್ಣ ಸಿದ್ದವಾಗಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇದೆಲ್ಲವೂ ಆಪ್ಟಿಮಸ್ ರೋಬೋಟ್ ಮಾರುಕಟ್ಟೆ ಹಾಗೂ ಸಾಮರ್ಥ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟು ಹಾಕಿವೆ.

ರೋಬೋಟ್‌ಗಳು ಮನೆ ಕೆಲಸ ಮಾಡಬಲ್ಲವು. ಅವು ಮಕ್ಕಳಿಗೆ ಪಾಠ ಕಲಿಸಬಲ್ಲವು, ನಾಯಿಯನ್ನು ತಿರುಗಾಡಲು ತೆಗೆದುಕೊಂಡು ಹೋಗಬಲ್ಲವು, ತರಕಾರಿ ತರಬಲ್ಲವು, ನಿಮ್ಮ ಸ್ನೇಹಿತನಾಗಬಹುದು ಹಾಗೂ ಪಾನೀಯವನ್ನು ಪೂರೈಸಬಲ್ಲದು. ಮನೆಕೆಲಸದ ರೋಬೋಟ್ ನೀವು ಹೇಳಿದ ಕೆಲಸಗಳನ್ನು ನಿರ್ವಹಿಸಲಿದೆ ಎಂದು ಎಲಾನ್ ಮಸ್ಕ್ ಹೇಳಿದ್ದರು.

20ರಿಂದ 30 ಸಾವಿರ ಡಾಲರ್‌ಗಳ ಮನೆ ಕೆಲಸದ ರೋಬೋಟ್ ಸಮಾರಂಭದ ಪ್ರಮುಖ ಆಕರ್ಷಣೆಯಾಗಿತ್ತು.

ಈಗ ಆಪ್ಟಿಮಸ್ ರೋಬೋಟ್ ಅನ್ನು ರಿಮೋಟ್ ಮೂಲಕ ನಿಯಂತ್ರಿಸಲಾಗಿತ್ತು ಎಂಬುದು ತಿಳಿದ ನಂತರ ನನಗೆ ಮೂರ್ಖ ನನ್ನಾಗಿಸಿದ ಭಾವನೆ ಬಂದಿದೆ ಎಂದು ಡೀಪ್‌ವಾಟರ್ ಅಸೆಟ್ ಮ್ಯಾನೇಜ್‌ಮೆಂಟ್‌ನ ಜೀನ್ ಮನ್‌ಸ್ಟರ್ ಹೇಳಿದ್ದಾರೆ. ಆದರೆ, ಕೃತಕ ಬುದ್ಧಿವಂತಿಕೆ ಎಷ್ಟು ವೇಗವಾಗಿ ಕಲಿಯಬಲ್ಲದು ಎಂಬುದರ ಮೇಲೆ ರೋಬೋಟ್‌ಗಳ ಮುಂದಿನ ಭವಿಷ್ಯ ನಿರ್ಧಾರವಾಗಲಿದೆ. ಆಪ್ಟಿಮಸ್ ರೋಬೋಟ್ ಕಾರ್ಯನಿರ್ವಹಣೆ ಉತ್ಸಾಹಕಾರಿಯಾಗಿದೆ ಎಂದು ಇನ್ನೂ ಕೆಲವರು ಭಾವಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೆ.ಬಿ. ಬಡಾವಣೆ, ಲಾಯರ್ ರಸ್ತೆ, ದೀಕ್ಷಿತ್ ರಸ್ತೆ, ಬಿಲಾಲ್ ಕಾಂಪೌಂಡ್, ಅಶೋಕ್ ರಸ್ತೆ, ಕಿರುವಾಡಿ ಲೇಔಟ್, ಪ್ರೆಸ್ ಕ್ಲಬ್, ನಾಯ್ಡು ಹೋಟೆಲ್, ರಾಘವೇಂದ್ರ ದೇವಸ್ಥಾನ ರಸ್ತೆ ಪಿ.ಬಿ. ರಸ್ತೆಯ (ಗಾಂಧಿ ಸರ್ಕಲ್ ನಿಂದ ಈರುಳ್ಳಿ ಮಾರ್ಕೆಟ್‌ವರೆಗೆ) ಇಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ಸಮಾವೇಶ

ಹಜ್ರತ್ ಮೊಹಮ್ಮದ್ ಪೈಗಂಬರ್ ವಿರುದ್ಧ ಯತಿ ನರಸಿಂಹಾನಂದ ಸರಸ್ವತಿ ಸ್ವಾಮೀಜಿ ತಮ್ಮ ಭಾಷಣಗಳಲ್ಲಿ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ಮತ್ತು ತಂಜೀಮ್ ಉಲೇಮಾ ಎ- ಅಹಲೆ ಸುನ್ನತ್ ಹಾಗೂ ಧರ್ಮಗುರುಗಳ ವತಿಯಿಂದ ಇಂದು ಮಧ್ಯಾಹ್ನ 3 ಕ್ಕೆ ಮಿಲಾದ್ ಮೈದಾನದಲ್ಲಿ ಸಮಾವೇಶ ನಡೆಯಲಿದೆ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಶಬ್ಬೀರ್ ಅಲಿ ಖಾನ್ ತಿಳಿಸಿದ್ದಾರೆ.

# ಘಟಿಸಿದ 21 ದಿನಗಳೊಳಗಾಗಿ ಜನನ, ಮರಣ ಪ್ರಮಾಣ ಪತ್ರ ವಿತರಣೆ



## ಬೆಳೆ ಕಟಾವು ಪ್ರಯೋಗಳನ್ನು ಕೈಗೊಳ್ಳಲು ಕಂದಾಯ, ತೋಟಗಾರಿಕೆ, ಕೃಷಿ ಇಲಾಖೆಯ ಅಧಿಕಾರಿಗಳ ನೇಮಕ - ಜಿಲ್ಲಾಧಿಕಾರಿ

ದಾವಣಗೆರೆ, ಅ. 17 - ಜನನ ಹಾಗೂ ಮರಣ ನೋಂದಣಾ ಮತ್ತು ಉಪನೋಂದಣಾಧಿಕಾರಿಗಳ ಜನನ, ಮರಣ ಘಟಿಸಿದ 21 ದಿನಗಳೊಳಗಾಗಿ ನೊಂದಣಿ ಮಾಡಿ ಪ್ರಮಾಣ ಪತ್ರ ವಿತರಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ನಾಗರಿಕ ನೋಂದಣಿ ಪದ್ಧತಿಯ ಸಮನ್ವಯ ಸಮಿತಿ ಹಾಗೂ ಕೃಷಿ ಅಂಕಿ ಅಂಶಗಳ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನನ ಮತ್ತು ಮರಣ ನೋಂದಣಿ ಮಾಡುವ ಸಮಯದಲ್ಲಿ ಮರಣ ದಿನಾಂಕ ಹಾಗೂ ನೋಂದಣಿ ಘಟಕವನ್ನು ತಪ್ಪಾಗಿ ಆಯ್ಕೆ ಮಾಡುತ್ತಿರುವುದು. ಮತ್ತು ಬೇರೆಯವರ ಆಧಾರ್ ಜೋಡಣೆ ಮಾಡಿ ಮರಣ ಪ್ರಮಾಣ ವಿತರಿಸುತ್ತಿರುವುದು ಕಂಡು ಬಂದಿದ್ದು, ಈ ರೀತಿಯ ತಪ್ಪುಗಳು ಇನ್ನೂ ಮುಂದೆ ಆಗದಂತೆ ಎಚ್ಚರ ವಹಿಸಿ ಕೆಲಸ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಬೆಳೆ ಕಟಾವು ಪ್ರಯೋಗಳನ್ನು ಕೈಗೊಳ್ಳಲು ಕಂದಾಯ, ತೋಟಗಾರಿಕೆ, ಕೃಷಿ ಇಲಾಖೆಯ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಹರಿಹರ 260, ಜಗಳೂರು 482, ದಾವಣಗೆರೆ 362, ಹೊನ್ನಾಳಿ 266, ಚನ್ನಗಿರಿ 428, ನ್ಯಾಮತಿ 212 ಬೆಳೆ ಕಟಾವು ಪ್ರಯೋಗಳನ್ನು ನಿಯೋಜನೆಗೊಳಿಸಲಾಗಿರುತ್ತದೆ. ಇದರಲ್ಲಿ ನಮೂನೆ 1 ಹರಿಹರ 58, ಜಗಳೂರು 20, ದಾವಣಗೆರೆ 101, ಹೊನ್ನಾಳಿ 82, ಚನ್ನಗಿರಿ 20 ಹಾಗೂ ನ್ಯಾಮತಿ 64 ಬಾಕಿ ಇದ್ದು, ಬಾಕಿ ಇರುವ ಪ್ರಯೋಗಳನ್ನು ಕೂಡಲೇ ಪೂರ್ಣಗೊಳಿಸಬೇಕು. ನಮೂನೆ 2ರ ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ದಾವಣಗೆರೆ ಜಿಲ್ಲೆಯಲ್ಲಿ ಜನವರಿ 2024 ರಿಂದ ಸೆಪ್ಟಂಬರ್ 2024 ರವರೆಗೆ ಜನನ 4744, ಮರಣ 4985 ಒಟ್ಟು 9729 ಆಗಿರುತ್ತದೆ ಎಂದು ಜಿಲ್ಲಾ ಸಂಖ್ಯಿಕ ಅಧಿಕಾರಿ ನೀಲಾ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



## ಮಳೆ ಹಾನಿ : ಲತಿಕಾ ದಿನೇಶ್ ಶೆಟ್ಟಿ ಭೇಟಿ

ದಾವಣಗೆರೆ, ಅ. 17 - ಸತತವಾಗಿ ಸುರಿಯುತ್ತಿರುವ ಮಳೆಯಿಂದ ಮನೆಗಳಿಗೆ ನುಗ್ಗಿ ರಾತ್ರಿಯೆಲ್ಲಾ ಜನರು ನೀರನ್ನು ತೆಗೆದುಹಾಕುವಲ್ಲಿ ತುಂಬಾ ತೊಂದರೆ ಅನುಭವಿಸಿದರು. ಸ್ಥಳಕ್ಕೆ ಭೇಟಿ ನೀಡಿದ್ದ ಲತಿಕಾ ದಿನೇಶ್ ಕೆ. ಶೆಟ್ಟಿ ಅವರು ಜನರ ಸಮಸ್ಯೆಯನ್ನು ಆಲಿಸಿದರು. ಮಹಾಪೌರರಾದ ಕೆ. ಚಮನ್ ಸಾಬ್ ಅವರೊಂದಿಗೆ ಮಾತನಾಡಿದ ಅವರು, ತೊಂದರೆ ಬಗ್ಗೆ ತಿಳಿಸಿ ಶೀಘ್ರ ಪರಿಹಾರ ನೀಡಲು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷರಾದ ಮಧು ಪವಾರ್ ಪರಶುರಾಮ್ ಶ್ರೀಕಾಂತ್ ಬಗರೆ ಯುವರಾಜ್ ಇನ್ನು ಮುಂತಾದವರಿದ್ದರು.

## ಸಂತೋಷ್‌ಕುಮಾರ್‌ಗೆ ಪ್ರಶಸ್ತಿ



ದಾವಣಗೆರೆ, ಅ.17- ಸುವರ್ಣ ಕರ್ನಾಟಕ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಸಂತೋಷ್ ಕುಮಾರ್ ಅವರು 'ಕರ್ನಾಟಕ ಮುಕುಟಮಣಿ' ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಂತೋಷ್ ಅವರ ನಾಡು-ನುಡಿ, ಕಲೆ, ಸಾಹಿತ್ಯ, ಸಮಾಜಸೇವೆ ಮತ್ತು ಸಂಘಟನಾ ಮನೋಭಾವವನ್ನು ಗುರುತಿಸಿದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು ಈ ಪ್ರಶಸ್ತಿ ನೀಡಿದೆ.

# ಸ್ಪರ್ಶ್ ಆಸ್ಪತ್ರೆಯಲ್ಲಿ 3ಡಿ ಪ್ರಿಂಟಿಂಗ್ : ದೇಶದಲ್ಲೇ ಮೊದಲ ಅತ್ಯಾಧುನಿಕ ತಂತ್ರಜ್ಞಾನ





ಬೆಂಗಳೂರು, ಅ. 17- 3-ಡಿ ಪ್ರಿಂಟಿಂಗ್ ಲ್ಯಾಬ್ ಪ್ರಾರಂಭಿಸುವುದರೊಂದಿಗೆ ಶಸ್ತ್ರ ಚಿಕಿತ್ಸಾ ಮಾರ್ಗದರ್ಶಿಗಳು, ಮಾದ ರಿಗಳು ಮತ್ತು ರೊಬೊಟಿಕ್ ವ್ಯವಸ್ಥೆ ಗಳನ್ನು ಒಂದೇ ಸೂರಿನಡಿ ಒದಗಿಸುವ ಗುರಿಯನ್ನು ಸ್ಪರ್ಶ್ ಆಸ್ಪತ್ರೆಗಳು ಹೊಂದಿವೆ ಎಂದು ಸ್ಪರ್ಶ್ ಆಸ್ಪತ್ರೆಯ ಅಧ್ಯಕ್ಷ ಮತ್ತು ಪ್ರಧಾನ ಮೂಳೆ ಶಸ್ತ್ರಚಿಕಿತ್ಸಕ ಡಾ.ಶರಣ್ ಶಿವರಾಜ್ ಪಾಟೀಲ್ ಹೇಳಿದರು.

ಇಲ್ಲಿನ ಸ್ಪರ್ಶ್ ಆಸ್ಪತ್ರೆಯಲ್ಲಿ ಇಂದು ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಪ್ರಯೋಗಾಲಯವನ್ನು ಉದ್ಘಾಟಿಸಿದ ಅವರು, ಅತ್ಯಾಧುನಿಕ ರೊಬೊಟಿಕ್ಸ್ ವ್ಯವಸ್ಥೆಗಳನ್ನು ಅಳವಡಿಸಿಕೊಂಡ ನಂತರ, ಆರೋಗ್ಯ ರಕ್ಷಣೆಯಲ್ಲಿ ನವೀನ ವಿಧಾನಗಳನ್ನು ಅಳವಡಿಸಿ, ಅದನ್ನು ಜಾರಿಗೆ ತಂದ ಮೊದಲ ಹಾಸ್ಪಿಟಲ್ ಸ್ಪರ್ಶ್ ಆಗಿದೆ. ಈ ವಿಷಯದಲ್ಲಿ ಅದ್ವಿತೀಯ (ಟ್ರಬಲ್ಶೆಸರ್) ಎಂದೆನಿಸಿದೆ ಎಂದು ಹೇಳಿದರು.

ಶಸ್ತ್ರ ಚಿಕಿತ್ಸೆಯ ನಿಖರತೆ ಮತ್ತು ನವೀನ ಪರಿಹಾರೋಪಾಯಗಳಿಂದ ರೋಗಿಯ ಆರೋಗ್ಯ ಸಮಸ್ಯೆಗಳಿಗೆ ನಿಖರ ಫಲಿತಾಂಶ ಕಾಣಲು ಸಾಧ್ಯವಾಗಿದೆ.ಸುಧಾರಿತ 3ಡಿ ಪ್ರಿಂಟಿಂಗ್ ಲ್ಯಾಬ್ ನೊಂದಿಗೆ ನಾವು ದೊಡ್ಡ ಹೆಜ್ಜೆ ಇಡುತ್ತಿದ್ದು, ಈ ಕ್ರಮವು ತಂತ್ರಜ್ಞಾನ, ಪರಿಣತಿ ಮತ್ತು ಅನುಭವದ ಮೇಲೆ ನಮ್ಮ ಕಾಯಕವನ್ನು ಇನ್ನಷ್ಟು ಸಬಲಗೊಳಿಸುತ್ತದೆ ಎಂದರು.

ಭಾರತದ ಮೊದಲ ಸುಧಾರಿತ 3 ಡಿ ಪ್ರಿಂಟಿಂಗ್ ಲ್ಯಾಬನ್ನು ಇನ್‌ಫೆಂಟ್ರಿ ರಸ್ತೆಯಲ್ಲಿ ಸ್ಪರ್ಶ್ ಹಾಸ್ಪಿಟಲ್‌ನಲ್ಲಿ ಸ್ಥಾಪಿಸಿದೆ. ಈ ಪ್ರಯೋಗಾಲಯವು ಅತ್ಯಾಧುನಿಕ 3 ಡಿ ಮುದ್ರಣ ತಂತ್ರಜ್ಞಾನ ಹೊಂದಿದೆ. ಒಂದೇ ಸೂರಿನಡಿ ಸ್ಕ್ಯಾನಿಂಗ್‌ನಿಂದ ಅಗತ್ಯವಿರುವ ಎಲ್ಲಾ ಪೂರಕ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅಂತಿಮ ಕಸ್ಟಮೈಸ್ ಮಾಡಿದ ಮಾದರಿಗಳ ರಚನೆಯವರೆಗೆ ಒಂದೇ ಸೂರಿನಡಿ ಸಮಗ್ರ ಪರಿಹಾರಗಳನ್ನು ನೀಡುವ ಮೂಲಕ ಅಸ್ಥಿಚಿಕಿತ್ಸೆ (ಆರ್ಥೋಪಿಡಿಕ್) ಮತ್ತು ವೈಯಕ್ತಿಕ ಆರೈಕೆಯಲ್ಲಿ ಕ್ರಾಂತಿ ಮಾಡಿದೆ ಎಂದು ಮಾಹಿತಿ ನೀಡಿದರು.

ನಾವು ಯಾವಾಗಲೂ ನಾವೀನ್ಯತೆಯಲ್ಲಿ ಮುಂಚೂಣಿಯಲ್ಲಿದ್ದೇವೆ ಮತ್ತು ಮೂಳೆ ಚಿಕಿತ್ಸೆಯಲ್ಲಿ ಜಾಗತಿಕವಾಗಿ ಲಭ್ಯವಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಅದನ್ನು ಜಾರಿಗೆ ತರಲು ಬದ್ಧರಾಗಿದ್ದೇವೆ. 'ಅಸ್ಥಿ ಚಿಕಿತ್ಸೆಯಲ್ಲಿ ಮಹಾ ನೈಪುಣ್ಯತೆ' ಎಂಬ ನಮ್ಮ ಧ್ಯೇಯ ಸಾಧನೆಯಲ್ಲಿ ಇದೊಂದು ದೊಡ್ಡ ಮೈಲುಗಲ್ಲು. ಭಾರತದಲ್ಲೇ ಮೊದಲ ಬಾರಿಗೆ ಸುಧಾರಿತ 3ಡಿ ಪ್ರಿಂಟಿಂಗ್ ಲ್ಯಾಬ್‌ನೊಂದಿಗೆ ನಾವು ದೊಡ್ಡ ಹೆಜ್ಜೆ ಇಡುತ್ತಿದ್ದೇವೆ ಮತ್ತು ಈ ಕ್ರಮವು ತಂತ್ರಜ್ಞಾನ, ಪರಿಣತಿ ಮತ್ತು ಅನುಭವದ ಮೇಲೆ ನಮ್ಮ ಕಾಯಕವನ್ನು ಇನ್ನಷ್ಟು ಸಬಲಗೊಳಿಸುತ್ತದೆ ಎಂದು 3 ಡಿ ಪ್ರಿಂಟಿಂಗ್ ಲ್ಯಾಬ್‌ನ ಬರಿದಾಗದ ತುಷ್ಟಿಗುಣ (ಯುಟಿಲಿಟಿ) ವನ್ನು ಡಾ. ಶರಣ್ ಶಿವರಾಜ್ ಪಾಟೀಲ್ ವಿವರಿಸಿದರು.

## ಯಾರಿಹರು ?

ಹಿಡಿವರಾರಿಹರು..........ರಮೆಗೆ
ಕೊಡೆಯನು ಹಿಡಿವರಾರಿಹರು?
ಧರೆಗೆ ಸುರಿದ ಅನವರತ ಮಳೆಗೆ
ಇಳೆಯು ನೆಂದಿಹ ಬಹು ಪರಿಗೆ...
ಹಿಡಿವರಾರಿಹರು..... ಭೂರಮೆಗೆ
ಕೊಡೆಯನು ಹಿಡಿವರಾರಿಹರು..?

ಮುನಿದ ವರುಣ ದೇವನವನು
ಎಡಬಿಡದೆ ಮಳೆಯನು ಸುರಿದನು
ಈ ಪರಿಯಲಿ ನೆಂದ ರಮೆಗೆ ತಂಡಿಯು
ತೊಪ್ಪೆಯಾಗಿ ಪಾಪ ಶೀತ ನೆಗಡಿಯು!
ಹಿಡಿವರಾರಿಹರು......? ವಸುಂಧರೆಗೆ
ಕೊಡೆಯನು......ಹಿಡಿವರಾರಿಹರು!?
ಮಡಿಲ ತುಂಬಾ ಚಿಗುರು ಸಸಿಗಳು

ಹಸಿರು ಉಸಿರಲಿ.... ರಾಶಿ ಗಿಡಗಳು
ನುಜ್ಜು ಗುಜ್ಜಾಗಿಹುದು ಅತಿವೃಷ್ಟಿ ಮಳೆಗೆ
ಹಿಡಿವರಾರಿಹರು....? ಮಹಾ ಇಳೆಗೆ..
ಕೊಡೆಯನು.....ಹಿಡಿವರಾರಿಹರು!?

ಪರಿಸರವನು ನಾಶ ಮಾಡಿರುವ ತಪ್ಪಿಗೆ
ಉಪಹಾರವನು ಕೊಟ್ಟನೆ ವರುಣನು?
ಮಾಡಿದ್ದುಣ್ಣೋ ಮಾರಾಯ ಮನುಜನೆ
ಪರಿಸರವನು ಉಳಿಸು ನೀ ಬೇಗಬೇಗನೆ !!
ಹಿಡಿವರಾರಿಹರು.... ಮಹಾ ಇಳೆಗೆ
ಕೊಡೆಯನು...ಹಿಡಿವರಾರಿಹರು !!?

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## 21 ರಿಂದ ಚಿಕಿತ್ಸಕ ಓಶೋ ಧ್ಯಾನ ಶಿಬಿರ

ದಾವಣಗೆರೆ, ಅ. 17- ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಮಾನಸಿಕ ಹಾಗೂ ದೈಹಿಕವಾಗಿ ಮನುಷ್ಯನ ಅಂತರಂಗ ಮತ್ತು ಬಹಿರಂಗ ಧ್ಯಾನ ಸಾಧನೆಗಾಗಿ ಓಶೋರವರು ನಿರೂಪಿಸಿರುವ ಚಿಕಿತ್ಸಕ ಓಶೋ ಧ್ಯಾನ ಶಿಬಿರವನ್ನು ಇದೇ ದಿನಾಂಕ 21 ರಿಂದ 27 ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪುಷ್ಪ (9036719573), ಅರ್ಚನ (9738572318) ತಿಳಿಸಿದ್ದಾರೆ.

### ಓದುಗರ ಪತ್ರ

## ಅಖಂಡ ಭಾರತದಲ್ಲಿ ಉರ್ದು ಮುಸ್ಲಿಮರ ಪ್ರಮುಖ ಭಾಷೆಯಾಗಿತ್ತೇ ?

**ಮಾನ್ಯರೇ,**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ನಗರದ ಸಮಾರಂಭವೊಂದರಲ್ಲಿ ಪಾಲ್ಗೊಂಡು ಮಾತನಾಡುವಾಗ ಬ್ರಿಟಿಷರ ಆಡಳಿತದಲ್ಲಿ ಉರ್ದು ಭಾಷೆಗೆ ಆದ್ಯತೆ ನೀಡದೇ ಮುಸ್ಲಿಂ ಸಮುದಾಯಕ್ಕೆ ಆಘಾತವನ್ನುಂಟು ಮಾಡಿತ್ತು ಎಂದು ಹೇಳಿದ್ದಾರೆ.

ಸರ್ಕಾರದ ಪ್ರಮುಖ ಹುದ್ದೆಗಳಿಗೆ ಮುಸ್ಲಿಮರು ಬಾರದಂತೆ ಬ್ರಿಟಿಷರು ಎಚ್ಚರ ವಹಿಸಿದ್ದರು. ಉರ್ದು ಭಾಷೆ ಬದಲು ಹಿಂದಿ ಭಾಷೆಗೆ ಆದ್ಯತೆ ನೀಡಲಾಯಿತು ಎಂದವರು ತಿಳಿಸಿದ್ದಾರೆ. ಆದರೆ, ಲಭ್ಯವಿರುವ ಸಾಮಾನ್ಯ ಜ್ಞಾನದ ಪ್ರಕಾರ, ಅಖಂಡ ಭಾರತದ ಮುಸ್ಲಿಮರೆಲ್ಲರೂ ಉರ್ದು ಮಾತನಾಡುತ್ತಿರಲಿಲ್ಲ. ಬ್ರಿಟಿಷರ ಕಾಲದಲ್ಲಿದ್ದ ಅಖಂಡ ಭಾರತವು ಸ್ವಾತಂತ್ರ್ಯಾನಂತರ ಮೂರು ಭಾಗವಾಗಿ ವಿಭಜನೆಯಾಯಿತು.

ಈಗಿನ ಬಾಂಗ್ಲಾದೇಶ ಸಂಪೂರ್ಣವಾಗಿ ಬಂಗಾಳಿ ಭಾಷೆ ಮಾತನಾಡುತ್ತಿದೆ. ಇಲ್ಲಿನ ಶೇ.99ರಷ್ಟು ಜನರು ಬಂಗಾಳಿ ಭಾಷಿಗರಾಗಿದ್ದಾರೆ. ಬಂಗಾಳಿ ಭಾಷೆಯ ಪ್ರೇಮವೇ ಅವರು ಪೂರ್ವ ಪಾಕಿಸ್ತಾನದಿಂದ ಪ್ರತ್ಯೇಕವಾಗಲು ಪ್ರಮುಖ ಕಾರಣವಾಗಿದೆ.

ಉಳಿದಂತೆ ಪಾಕಿಸ್ತಾನದಲ್ಲೂ ಉರ್ದು ಮಾತನಾಡುವವರ ಸಂಖ್ಯೆ ಶೇ.9ರಷ್ಟು ಮಾತ್ರವಿದೆ. ಅಖಂಡ ಭಾರತದ ಇತಿಹಾಸ ಪರಿಗಣಿಸಿದಾಗ ಉರ್ದು ಭಾಷೆಗೂ ಮುಸ್ಲಿಮರಿಗೂ ಎಷ್ಟರ ಮಟ್ಟಿಗೆ ನಂಟಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಭಾರತವನ್ನು ವಿಭಜಿಸಿದಾಗ ಅತಿ ಹೆಚ್ಚಿನ ಮುಸ್ಲಿಮರು ಪಾಕಿಸ್ತಾನಕ್ಕೆ ಹಾಗೂ ಬಾಂಗ್ಲಾದೇಶಕ್ಕೆ ತೆರಳಿದರು. ಅವರು ತಮ್ಮದೇ ಆದ ಇತಿಹಾಸ ರಚಿಸಿಕೊಂಡಿದ್ದಾರೆ. ಹೀಗಾಗಿ ಅಖಂಡ ಭಾರತದ ಬಹುತೇಕ ಮುಸ್ಲಿಮರು ತಮ್ಮ ಕೊಡುಗೆಯನ್ನು ತಾವು ಸರಿಯಾಗಿ ದಾಖಲಿಸಿಕೊಂಡಿದ್ದಾರೆ ಎಂದು ಭಾವಿಸಬಹುದು. ಇಲ್ಲವೆಂದಾದರೆ, ಪಾಕಿಸ್ತಾನ ಇಲ್ಲವೇ ಬಾಂಗ್ಲಾದೇಶವನ್ನು ಸಂಪರ್ಕಿಸಿ ಈ ಬಗ್ಗೆ ಸರಿಪಡಿಸಲು ಕೋರಬೇಕಾಗುತ್ತದೆ.

ಸರ್ಕಾರದ ಪ್ರಮುಖ ಹುದ್ದೆಗಳಿಗೆ ಮುಸ್ಲಿಮರು ಬಾರದಂತೆ ಬ್ರಿಟಿಷರು ಎಚ್ಚರ ವಹಿಸಿದ್ದರು ಎಂದೂ ಬಿಳಿಮಲೆ ಹೇಳಿದ್ದಾರೆ. ಬ್ರಿಟಿಷರ ಆಡಳಿತದಲ್ಲಿ ಸಾಕಷ್ಟು ಸಂಸ್ಥಾನಗಳು ಮುಸ್ಲಿಂ ರಾಜರ ಬಳಿ ಇದ್ದವು. ಈ ಮುಸ್ಲಿಂ ರಾಜರು ತಮ್ಮ ಸಂಸ್ಥಾನದ ಪ್ರಮುಖ ಹುದ್ದೆಗಳಿಗೆ ಮುಸ್ಲಿಮರು ಬರದಂತೆ ನೋಡಿಕೊಂಡಿದ್ದರೇ? ಈ ಬಗ್ಗೆ ಇತಿಹಾಸಕಾರರು ಸಂಶೋಧನೆ ನಡೆಸಬೇಕಿದೆ.

ಪ್ರಾಚೀನ ಭಾರತದುದ್ದಕ್ಕೂ ಸಂಸ್ಕೃತವು ಉನ್ನತ ವ್ಯಾಸಂಗದ ಭಾಷೆಯಾಗಿತ್ತು. ಸಂಸ್ಕೃತದಲ್ಲಿ ಪುರಾಣಗಳಷ್ಟೇ ಅಲ್ಲದೆ, ಕಲೆ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ ಇತ್ಯಾದಿಗಳೆಲ್ಲವೂ ಇದ್ದವು. ಇಂತಹ ಸಂಸ್ಕೃತವನ್ನೇ ಬ್ರಿಟಿಷರ ಕಾಲದಲ್ಲಿ ಕೈ ಬಿಡಲಾಯಿತು. ಇದರಿಂದ ಹಿಂದೂ ಸಮಾಜಕ್ಕೆ ಆದ ಆಘಾತ ಅಪಾರ. ಬ್ರಿಟಿಷರ ಆಡಳಿತದಲ್ಲಿ ಅವರಿವರೆನ್ನದೇ ಭಾರತದ ಎಲ್ಲ ಸಮುದಾಯಗಳು ಸಂಕಷ್ಟದಿಂದ ನಲುಗಿದ್ದವು. ಹೀಗಿರುವಾಗ ಮುಸ್ಲಿಮರನ್ನೇ ಪ್ರತ್ಯೇಕವಾಗಿ ಸಂಕಷ್ಟಕ್ಕೆ ಗುರಿಯಾಗಿದ್ದರು ಎಂದು ಗುರುತಿಸುವುದರಲ್ಲಿ ಯಾವ ಅರ್ಥವಿದೆಯೋ ಗೊತ್ತಿಲ್ಲ.

- ಜಿ.ಎನ್. ಕಾಮತ್, ದಾವಣಗೆರೆ.

# ಮಲೇಬೆನ್ನೂರಿನ ವಿವಿಧೆಡೆ ವಾಲ್ಮೀಕಿ ಜಯಂತಿ ಆಚರಣೆ





ಮಲೇಬೆನ್ನೂರು, ಅ.17 - ಪಟ್ಟಣದ ವಿವಿಧೆಡೆ ಆದಿಕವಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಪುರಸಭೆ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪುರಭೆಯ ಪ್ರಭಾರಿ ಅಧ್ಯಕ್ಷರಾದ ಶ್ರೀಮತಿ ನಪ್ಸೀಯಾ ಬಾನು ಚಮನ್ ಷಾ ಅವರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಎಲ್ಲರಿಗೂ ಶುಭಾಷಯ ಕೋರಿದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಸಾಬೀರ್ ಅಲಿ, ಕೆ.ಜಿ.ಲೋಕೇಶ್, ಬಿ.ವೀರಯ್ಯ, ಬಿ.ಸುರೇಶ್ ಮತ್ತು ನಾಯಕ ಸಮಾಜದ ಮುಖಂಡ ಟಿ.ಗಜೇಂದ್ರಪ್ಪ ಮಾತನಾಡಿ, ರಾಮಾಯಣ ಮಹಾಕಾವ್ಯದ ಮೂಲಕ ಜಗತ್ತಿಗೆ ಮಾನವೀಯ ಮೌಲ್ಯ ಮತ್ತು ಆದರ್ಶವನ್ನು ತಿಳಿಸಿಕೊಟ್ಟ ಆದಿಕವಿ ವಾಲ್ಮೀಕಿ ಅವರು ವಿಶ್ವಮಾನವರಾಗಿದ್ದಾರೆ ಎಂದರು.

ಪರಿವರ್ತನೆಗೆ ಮತ್ತೊಂದು ಹೆಸರೇ ವಾಲ್ಮೀಕಿಯಾಗಿದ್ದು, ರಾಮ ಹುಟ್ಟುವುದಕ್ಕಿಂತ ಮೊದಲೇ ರಾಮಾಯಣ ಬರೆದ ಕೀರ್ತಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದು ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ತಿಳಿಸಿದರು.

ಪುರಸಭೆ ಸದಸ್ಯರಾದ ಶಬ್ಬೀರ್ ಖಾನ್, ಭೋವಿ ಶಿವು, ಷಾ ಅಬ್ರಾರ್, ಟಿ. ಹನುಮಂತಪ್ಪ, ಎ. ಆರೀಫ್ ಅಲಿ, ದೊಡ್ಮನಿ ಬಸವರಾಜ್, ಪಿ.ಆರ್.ರಾಜು, ಭೋವಿಕುಮಾರ್, ಸುಬ್ಬಿ ರಾಜಣ್ಣ, ಎ.ಕೆ. ಲೋಕೇಶ್, ಪಿ.ಆರ್.ಕುಮಾರ್, ಚಮನ್ ಷಾ, ಪಿ.ಹೆಚ್.ಶಿವಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ಶಾವಿಗಿ, ನಾಯಕ ಸಮಾಜದ ಅಧ್ಯಕ್ಷ ನಿವೃತ್ತ ಶಿಕ್ಷಕ ಜಿ.ಆರ್. ನಾಗರಾಜ್, ಟಿ.ವಾಸು, ವೇರ್ ಹೌಸ್ ಬಸವರಾಜ್, ಎ.ಕೆ.ನಾಗರಾಜ್, ಪುರಸಭೆ ಅಧಿಕಾರಿಗಳಾದ ನವೀನ್, ಶಿವರಾಜ್, ಧನಂಜಯ್, ಚಿತ್ರಾ, ರಾಘವೇಂದ್ರ ಮತ್ತಿತರರು ಭಾಗವಹಿಸಿದ್ದರು.

ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಜಿ.ಮಂಜುನಾಥ್ ಪಟೇಲ್, ಪಿ.ಆರ್.ಕುಮಾರ್, ಸಿ.ಅಬ್ದುಲ್ ಹಾದಿ, ಶ್ರೀಮತಿ ಚಂದ್ರಮ್ಮ, ಯುನೂಸ್, ಸಂಘದ ಸಿಇಓ ಸಿದ್ದಪ್ಪ, ಸಿಬ್ಬಂದಿಗಳಾದ ಪ್ರಕಾಶ್, ಬಸವರಾಜ್, ಜಾಫರ್ ಭಾಗವಹಿಸಿದ್ದರು.

ನಾಡ ಕಚೇರಿಯಲ್ಲಿ ಜರುಗಿದ ವಾಲ್ಮೀಕಿ ಜಯಂತಿಯಲ್ಲಿ ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ ಮತ್ತು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಎಸ್‌ಬಿಕೆಎಂ ಶಾಲೆಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಶಿಕ್ಷಕರಾದ ಯಂಕನಾಯ್ಕ, ಜಿ.ಕೆ.ಬಸವರಾಜ್, ಪ್ರೇಮಲೀಲಾ ಬಾಯಿ, ಸಿ.ಹನುಮಂತಪ್ಪ, ಎಂ.ಕೆ.ಸುನೀಲ್ ಇದ್ದರು.

ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮುಖ್ಯ ಶಿಕ್ಷಕ ಮಲ್ಲಿಕಾರ್ಜುನ್, ಹಿರಿಯ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ ಹಾಗೂ ಸಹ ಶಿಕ್ಷಕರಿಯರು ಪಾಲ್ಗೊಂಡಿದ್ದರು.

## ರಾಣೇಬೆನ್ನೂರು ನಾಳೆ ವಿದ್ಯುತ್ ಗ್ರಾಹಕರ ಸಭೆ

ರಾಣೇಬೆನ್ನೂರು, ಅ. 17 - ರಾಣೇಬೆನ್ನೂರಿನ ಉಪ-ವಿಭಾಗ-1ರ ಕಛೇರಿಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ನಾಡಿದ್ದು ದಿನಾಂಕ 19 ರ ಮಧ್ಯಾಹ್ನ 3.30 ರಿಂದ 5.30 ರವರೆಗೆ ಆಯೋಜಿಸಿದ್ದು, ಗ್ರಾಹಕರು ವಿದ್ಯುತ್ ಬಗೆಗಿನ ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿದೆ.

## ನಗರದಲ್ಲಿ ಇಂದು ಸದನ ಸಮಿತಿ ಸಭೆ

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪಿ.ಎಂ. ನರೇಂದ್ರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಇಂದು ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಪಂಚಾಯತಿಯಲ್ಲಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.


**ಅನ್ವಯ ಆಯುರ್ವೇದ ಆಸ್ಪತ್ರೆ**

ವಿಳಾಸ : # 1981, 10ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.
ಫೋ. 08192-252228, ಮೊ. 8618642929

**ಆಯುರ್ವೇದದ ಮಕ್ಕಳ ತಜ್ಞೆ ದಾವಣಗೆರೆಯಲ್ಲಿ**



ಬೆಂಗಳೂರಿನ ಪ್ರಖ್ಯಾತ ವೈದ್ಯರಾದ ಡಾ॥ ಪೂರ್ಣಿಮಾ ಅವರು ದಾವಣಗೆರೆಗೆ ಭೇಟಿ ನೀಡಲಿದ್ದಾರೆ. ಮಕ್ಕಳಲ್ಲಿ ಕಂಡು ಬರುವಂತಹ ವಿವಿಧ ಕಾಯಿಲೆಗಳಿಗೆ ಆಯುರ್ವೇದದ ಔಷಧಿಗಳಿಂದ ಸರಳ ಪರಿಹಾರ ನೀಡಲಾಗುತ್ತದೆ.
ಭೇಟಿಯ ದಿನಾಂಕ : 20.10.2024ರ ಭಾನುವಾರ, ಸಮಯ : ಬೆಳಿಗ್ಗೆ 10 ರಿಂದ 2ರವರೆಗೆ
ಮೊದಲೇ ಹೆಸರು ನೋಂದಾಯಿಸಿದವರಿಗೆ ಮಾತ್ರ ಅವಕಾಶ

**ಬೆಳಿಗ್ಗೆ - 10.00 ರಿಂದ ಮಧ್ಯಾಹ್ನ 2.00ರ ವರೆಗೆ**



ಶ್ರೀ ಅಕ್ಕಮಹಾದೇವಿ ಸಮಾಜ(ರಿ)

**ಶ್ರೀ ಅಕ್ಕಮಹಾದೇವಿ ಕಂಪ್ಯೂಟರ್ ಶಾಲೆ**

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ

**ಕಂಪ್ಯೂಟರ್ ಶಾಲೆಗೆ ಪ್ರವೇಶ ಪ್ರಕಟಣೆ**

ಶ್ರೀ ಅಕ್ಕಮಹಾದೇವಿ ಸಮಾಜದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಅಕ್ಕಮಹಾದೇವಿ ಕಂಪ್ಯೂಟರ್ ಶಾಲೆಗೆ 2024-25ನೇ ಶೈಕ್ಷಣಿಕ ವರ್ಷಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಪ್ರವೇಶ ಪ್ರಾರಂಭವಾಗಿರುತ್ತದೆ. Basic, MS-Office, Windows, Dos **ನುಡಿ, ಟ್ಯಾಲಿ** ಇತರೆ ವಿಷಯಗಳಲ್ಲಿ ಅನುಭವವಿರುವ ಶಿಕ್ಷಕರಿಂದ ಶಿಕ್ಷಣ ಕೊಡಲಾಗುವುದು. ಕನಿಷ್ಠ SSLCಯಲ್ಲಿ ಉತ್ತೀರ್ಣರಾದವರು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಕೇವಲ ಕೆಲವೇ ಪ್ರವೇಶಕ್ಕೆ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ ಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿರಿ.

**6 ತಿಂಗಳ ಕೋರ್ಸ್**
Basic, Windows, Dos, MS-Office, **ನುಡಿ**, Foxpro, Photoshop **ಇತರೆ**

**1 ವರ್ಷದ ಕೋರ್ಸ್**
Basic, Windows, Dos, MS-Office, **ನುಡಿ**, Foxpro, Photoshop, C++, Tally

ಶ್ರೀಮತಿ ಡಿ. ಸುವರ್ಣಮ್ಮ, ಕಾರ್ಯದರ್ಶಿ — ಶ್ರೀಮತಿ ಕೆ.ಕೆ ಸುಶೀಲಮ್ಮ, ಅಧ್ಯಕ್ಷರು



# ಮನುಕುಲಕ್ಕೆ ರಾಮಾಯಣ ಮಾದರಿ

**ಹರಿಹರದ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್**

ಹರಿಹರ, ಅ. 17 - ಮಹರ್ಷಿ ವಾಲ್ಮೀಕಿ ಬರೆದ ರಾಮಾಯಣ ಒಂದು ಧರ್ಮಕ್ಕೆ ಮಾತ್ರ ಸೀಮಿತವಾಗದೇ ಇರುವುದರಿಂದ, ವಿಶ್ವ ಮಟ್ಟದಲ್ಲಿ ಮಾನವ ಕುಲಕ್ಕೆ ಮಾದರಿಯಾಗಿ ಹೊರಹೊಮ್ಮಿತು ಎಂದು ಶಾಸಕ ಬಿ.ಪಿ. ಹರೀಶ್ ಅಭಿಪ್ರಾಯಪಟ್ಟರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಸಭಾಂಗಣದಲ್ಲಿ ಇಂದು ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿಯವರು ಬರೆದ ರಾಮಾಯಣ, ಮಹಾಭಾರತ ಬೇರೆ ಬೇರೆ ದೇಶದ ಆಡಳಿತವು ಇದರ ಅಂಶಗಳ ಆಧಾರದ ಅಡಿಯಲ್ಲಿ ನಡೆಯುತ್ತಿದ್ದು, ಅಂತಹ ಮಹಾ ಶಕ್ತಿ ರಾಮಾಯಣಕ್ಕೆ ಇದೆ, ಅಂತಹ ಮಹಾನ್ ವ್ಯಕ್ತಿಯ ಆದರ್ಶಗಳನ್ನು ಇಂದಿನ ಯುವ ಪೀಳಿಗೆಗೆ ತಿಳಿಸುವ ದೃಷ್ಟಿಯಿಂದ ಸರ್ಕಾರ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅದ್ಧೂರಿಯಾಗಿ ನಡೆಸುವುದಕ್ಕೆ ಮುಂದಾಗಿದೆ ಎಂದು ಹೇಳಿದರು.

ಎಂ.ಕೆ.ಇ.ಟಿ. ಶಾಲೆ ಮುಖ್ಯ ಶಿಕ್ಷಕ ಡಿ.ಟಿ. ತಿಪ್ಪಣ್ಣ ರಾಜು ಉಪನ್ಯಾಸಕರಾಗಿ ಮಾತನಾಡಿ, ಮಹರ್ಷಿ ವಾಲ್ಮೀಕಿ ಯವರ ತತ್ವ, ಆದರ್ಶಗಳು ಮತ್ತು ಅವರಿಗೆ ಇರುವಂತಹ ಜಾಣ್ಮೆ, ತಾಳ್ಮೆ, ಕಾಯಕ ನಿಷ್ಠೆ ಮತ್ತು ನೈಪುಣ್ಯತೆ ಜೊತೆಗೆ ಅವರು ಸಮಾಜದ ಒಳಿತಿಗಾಗಿ ಕೊಟ್ಟಂತಹ ಕೊಡುಗೆಗಳು ಇಂದಿನ ಯುವಕರಿಗೆ ಸ್ಪೂರ್ತಿಯನ್ನು ನೀಡುತ್ತಿವೆ ಎಂದು ಹೇಳಿದರು.

ಈ ವೇಳೆ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಸನ್ಮಾನಿಸಿ ಗೌರವಿಸಿ ಕಿರು ಕಾಣಿಕೆ ನೀಡಿದರು.

ಪ್ರಾಸ್ತಾವಿಕ ನುಡಿಯನ್ನು ಸಮಾಜ ಕಲ್ಯಾಣ ಇಲಾಖೆಯ ಪ್ರಭಾರಿ ಎಇಇ ರಾಮಕೃಷ್ಣಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ತಾ.ಪಂ. ಇ.ಓ. ಸುಮಲತ, ದಾವಣಗೆರೆ ವಾಣಿಜ್ಯ ಇಲಾಖೆ ಉಪ ಆಯುಕ್ತ ಮಂಜುನಾಥ್, ಬಿಇಓ ಡಿ. ದುರುಗಪ್ಪ, ನಗರಸಭೆ ಸದಸ್ಯ ದಿನೇಶ್ ಬಾಬು, ರಾಜನಹಳ್ಳಿ ವಾಲ್ಮೀಕಿ ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್ ಸಾಕೇರ್, ವಾಲ್ಮೀಕಿ ಸಮಾಜದ ನಗರ ಘಟಕದ ಗೌರವಾಧ್ಯಕ್ಷ ಹಂಚಿನ ನಾಗಪ್ಪ, ಅಧ್ಯಕ್ಷ ಮಕ್ರಿ ಪಾಲಾಕ್ಷಪ್ಪ, ಕಾರ್ಯದರ್ಶಿ ಧನರಾಜ್, ಮಹಿಳಾ ಘಟಕದ ಅಧ್ಯಕ್ಷೆ ಪಾರ್ವತಮ್ಮ, ಸಮಾಜ ಕಲ್ಯಾಣ ಇಲಾಖೆ ರಾಮಕೃಷ್ಣಪ್ಪ, ಕೃಷಿ ಇಲಾಖೆ ನಾರನಗೌಡ, ಬಿ.ಸಿ.ಎಂ ಇಲಾಖೆ ಆಸ್ಮಾಬಾನು, ಕಾರ್ಮಿಕ ಇಲಾಖೆ ಕವಿತಾ, ಸಿಡಿಪಿಓ ಪೂರ್ಣಿಮಾ, ತೋಟಗಾರಿಕೆ ಇಲಾಖೆ ಶಶಿಧರಯ್ಯ, ಸಮಾಜ ಕಲ್ಯಾಣ ಇಲಾಖೆ ಎಳೆಹೊಳೆ ಮಂಜುನಾಥ್, ವಾಲ್ಮೀಕಿ ಸಮಾಜದ ಮುಖಂಡರಾದ ಮಾರುತಿ ಬೇಡರ್, ಸಿದ್ದಪ್ಪ, ಆಟೋ ರಾಜು, ಮೂರ್ತಿ, ಮನೋಹರ, ಜಿಗಳಿ ಪ್ರಕಾಶ್, ಭರತ್ ಇತರರು ಹಾಜರಿದ್ದರು.

# ನಗರದಲ್ಲಿ ಡಯಾನಿ ಆಭರಣ ಪ್ರದರ್ಶನದ ಉದ್ಘಾಟನೆ



**ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಈಜುಕೊಳದ ಬಳಿ ಇರುವ ಈಡನ್ ಗಾರ್ಡನ್‌ನಲ್ಲಿ ಡಯಾನಿ ಸಂಸ್ಥೆಯ ವತಿಯಿಂದ ಎರಡು ದಿನಗಳ ಆಭರಣಗಳ ಪ್ರದರ್ಶನ ಆಯೋಜಿಸಲಾಗಿದೆ. ಗುರುವಾರ ಪ್ರದರ್ಶನಕ್ಕೆ ಚಾಲನೆ ನೀಡಲಾಗಿದ್ದು, ಶುಕ್ರವಾರವೂ ಆಭರಣ ಪ್ರದರ್ಶನ ಇರಲಿದೆ.**

# ವಾಹ್.. ! ಇದು ಸ್ಮಾರ್ಟ್ ಬಸ್ ನಿಲ್ದಾಣ



**ಖಾಸಗಿ ಬಸ್ ನಿಲ್ದಾಣದ ತೆಗಳಿಕೆ ಬೆನ್ನಲ್ಲೇ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಮೆಚ್ಚುಗೆ**

ದಾವಣಗೆರೆ: ಸ್ಮಾರ್ಟ್ ಸಿಟಿ ಯೋಜನೆಯಡಿ ಕಣ್ಣಿಗೆ ಕಾಣಿಸುವಂತಹ ಕೆಲ ಕಾಮಗಾರಿಗಳಲ್ಲಿ ಇತ್ತೀಚೆಗೆ ಸಾರ್ವಜನಿಕರ ಸೇವೆಗೆ ಲೋಕಾರ್ಪಣೆಗೊಂಡ ಖಾಸಗಿ ಹಾಗೂ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಗಳೂ ಸೇರಿವೆ.

ಇವುಗಳ ಪೈಕಿ ಖಾಸಗಿ ಬಸ್ ನಿಲ್ದಾಣ 'ಬಸ್‌ಗಳ ನಿಲುಗಡೆಗೂ ಜಾಗವಿಲ್ಲದಂತಹ ಬಸ್ ನಿಲ್ದಾಣ' ಎಂದು ಸಾರ್ವಜನಿಕರಿಂದ ತೀವ್ರ ಟೀಕೆಗೆ ಗುರಿಯಾಗಿದ್ದರೆ, ಕೆಎಸ್ಸಾರ್ಟಿಸಿ ಬಸ್ ನಿಲ್ದಾಣವು ಅಷ್ಟೇ ಹೊಗಳಿಕೆಗೆ ಪಾತ್ರವಾಗುತ್ತಿದೆ

ಪ್ರಥಮ ಬಾರಿಗೆ ಬಸ್ ನಿಲ್ದಾಣದ ಒಳ ಪ್ರವೇಶಿಸುತ್ತಲೇ 'ವಾಹ್' ಎನ್ನುವ ಉದ್ಗಾರ ಬರುವಷ್ಟರ ಮಟ್ಟಿಗೆ ಸುಂದರವಾಗಿ ಕಾಣುತ್ತಿದೆ. ಪ್ರಯಾಣಿಕರಿಂದಲೂ ಮೆಚ್ಚುಗೆಯ ಮಾತುಗಳು ಕೇಳಿ ಬರುತ್ತಿವೆ.

ಹೌದು, ಬರೋಬ್ಬರಿ 109.84 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ನೂತನ ಬಸ್ ನಿಲ್ದಾಣ 6 ಎಕರೆ 7 ಗುಂಟೆ ಪ್ರದೇಶದಲ್ಲಿದೆ. ಈ ನಿಲ್ದಾಣದಲ್ಲಿ 14 ಪ್ಲಾಟ್‌ಫಾರ್ಮ್‌ಗಳಿವೆ. ಏಕಕಾಲದಲ್ಲಿ 46 ಬಸ್‌ಗಳ ನಿಲುಗಡೆ ಸಾಧ್ಯವಿದೆ.

ಬಸ್ ನಂಬರ್ ಹಾಗೂ ಸಮಯದ ಮಾಹಿತಿ ನೀಡುವ ಡಿಜಿಟಲ್ ಪರದೆಗಳಿವೆ. ಸ್ವಚ್ಛ ಗಾರ್ಡನ್ ಹಸಿರು ಕಣ್ಣಿಗೆ ತಂಪು ನೀಡುತ್ತದೆ. ಶುದ್ಧ ಕುಡಿಯುವ ನೀರು, ಲಿಫ್ಟ್ ವ್ಯವಸ್ಥೆ, ಪಾರ್ಕಿಂಗ್, ಲಗೇಜ್ ರೂಂ, ಲಾಕರ್, ಪೊಲೀಸ್ ಚೌಕಿ ಸೇರಿದಂತೆ ಹತ್ತಾರು ಸೌಲಭ್ಯಗಳಿವೆ.

**22 ವಾಣಿಜ್ಯ ಮಳಿಗೆಗಳಿವೆ.** ಇವುಗಳ ಪೈಕಿ ಬೇಕರಿ, ಜನರಲ್ ಸ್ಟೋರ್‌ಗಳೇ ಹೆಚ್ಚಾಗಿವೆ. 3 ವಿದ್ಯುತ್ ನಿರ್ವಹಣಾ ಕೊಠಡಿಗಳಿವೆ. ಶುದ್ಧ ಸಸ್ಯಹಾರಿ ಕ್ಯಾಂಟೀನ್ ದಿನದ 24 ತಾಸು ತೆರೆದಿರುತ್ತದೆ. ಮಾಂಸಾಹಾರಿ ಹೋಟೆಲ್ ಸಹ ಶೀಘ್ರವೇ ಆರಂಭಕ್ಕೆ ಸಿದ್ಧತೆ ನಡೆಯುತ್ತಿದೆ. ನಿಲ್ದಾಣದಲ್ಲಿ ಚಿಕ್ಕಮಕ್ಕಳ ಪೋಷಣಾ ಕೊಠಡಿಯಿದ್ದು, ತಾಯಂದಿರು ಮಗುವಿಗೆ ಹಾಲುಣಿಸಿ, ವಿಶ್ರಾಂತಿ ಪಡೆಯಬಹುದಾಗಿದೆ. ಒಳಗಡೆಯೇ ಪ್ರತ್ಯೇಕ ಶೌಚಾಲಯ ಹಾಗೂ ಸ್ನಾನದ ಕೊಠಡಿಯೂ ಇದೆ.

**ಕಾಯಿನ್ ಹಾಕಿದ್ರೆ ಕುಡಿಯೋ ನೀರು:** ನೂತನ ಬಸ್ ನಿಲ್ದಾಣದಲ್ಲಿ ಲೀಟರ್ ಶುದ್ಧ ಕುಡಿಯುವ ನೀರಿಗೆ 20 ರೂ. ಕೊಡಬೇಕೆಂದಿಲ್ಲ. 1 ಕಾಯಿನ್ ಹಾಕಿದರೆ 1 ಲೀಟರ್ ಹಾಗೂ 2 ರೂ. ಕಾಯಿನ್‌ಗೆ 2 ಲೀಟರ್ ಶುದ್ಧ ಕುಡಿಯುವ ನೀರು ದೊರೆಯುತ್ತದೆ. ಆದರೆ ವಿದ್ಯುತ್ ಸಂಪರ್ಕ ಇಲ್ಲದಾಗ ಈ ಯಂತ್ರಗಳು ಕಾರ್ಯ ನಿರ್ವಹಿಸುತ್ತಿಲ್ಲ. ಈ ಸಮಸ್ಯೆಯನ್ನು ಬಗೆ ಹರಿಸುವುದಾಗಿ ಸಿದ್ದೇಶ್ ಎಚ್.ಎಸ್. ಸಹಾಯಕ ಸಂಚಾರ ಅಧೀಕ್ಷಕರು ಪತ್ರಿಕೆಗೆ ತಿಳಿಸಿದರು.



ನೂತನ ನಿಲ್ದಾಣದಲ್ಲಿ ಬಸ್‌ಗೆ ಕಾಯುತ್ತಿರುವ ಪ್ರಯಾಣಿಕರು



ಲಗೇಜ್ ರೂಂ ಹಾಗೂ ಲಾಕರ್ ಸೌಲಭ್ಯದ ವಿಭಾಗ



ಕಾಯಿನ್ ನೀಡಿ ಶುದ್ಧ ನೀರು ಪಡೆಯುವ ಘಟಕ

**ಲಾಕರ್ ಸೌಲಭ್ಯ:** ಪ್ರಯಾಣಿಕರಿಗೆ ಲಗೇಜ್ ಇಟ್ಟುಕೊಳ್ಳಲು ಇಲ್ಲಿ ಲಗೇಜ್ ರೂಂ ವ್ಯವಸ್ಥೆ ಇದೆ. ಅಲ್ಲದೇ ಲಾಕರ್ ಸೌಲಭ್ಯವೂ ಇದೆ. ನಿಗದಿತ ಶುಲ್ಕ ಪಾವತಿಸಿ ಲಗೇಜ್ ಇಟ್ಟುಕೊಳ್ಳುವ ವ್ಯವಸ್ಥೆ ಇದೆ.

**3 ಸುಸಜ್ಜಿತ ಶೌಚಾಲಯಗಳು:** ಬಸ್ ನಿಲ್ದಾಣದಲ್ಲಿ ಮೂರು ಸುಸಜ್ಜಿತ ಶೌಚಾಲಯಗಳಿವೆ. ಪುರುಷರು, ಮಹಿಳೆಯರು ಹಾಗೂ ಅಂಗವಿಕಲರಿಗಾಗಿ ಇರುವ ಪ್ರತ್ಯೇಕ ಶೌಚಾಲಯಗಳಿವು. ಟಾಯ್ಲೆಟ್‌ಗೆ 2 ರೂ. ದರ ನಿಗದಿಪಡಿಸಲಾಗಿದೆ. ಅಂದ ಹಾಗೆ ಮೂತ್ರವಿಸರ್ಜನೆಗೆ ಉಚಿತ ಎನ್ನಲಾಗುತ್ತಿದೆಯಾದರೂ, 2 ರೂ. ಟಾಯ್ಲೆಟ್‌ಗೆ 5 ರೂ. ಪಡೆಯಲಾಗುತ್ತಿದೆ.

**ವಿಶಾಲ ಪಾರ್ಕಿಂಗ್ ವ್ಯವಸ್ಥೆ:** 3500 ದ್ವಿಚಕ್ರ ವಾಹನಗಳನ್ನು ನಿಲ್ಲಿಸಬಹುದಾದ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಬಸ್ ನಿಲ್ದಾಣದ ನೆಲ ಮಹಡಿಯಲ್ಲಿದೆ. ಲಘು ವಾಹನ ನಿಲುಗಡೆಗೂ ಅವಕಾಶವಿದ್ದು, ಇಲ್ಲಿಂದ ಫ್ಲಾಟ್‌ಫಾರ್ಮ್ ತೆರಳಲು ಮೆಟ್ಟಿಲು ವ್ಯವಸ್ಥೆ, ಲಿಫ್ಟ್ ವ್ಯವಸ್ಥೆಯೂ ಇದೆ.

ನೂರಕ್ಕೂ ಹೆಚ್ಚು ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಿ.ಸಿ ಟಿವಿಗಳ ನಿರ್ವಹಣೆ ಹಾಗೂ ಕಣ್ಗಾವಲಿಗೆ ಮೊದಲನೇ ಮಹಡಿಯಲ್ಲಿ ಕಂಟ್ರೋಲ್ ರೂಂ ಇದೆ.

ನಿಲ್ದಾಣದ ಮತ್ತೊಂದು ಭಾಗದಲ್ಲಿ ಶಾಪಿಂಗ್ ಮಾಲ್‌ಗಳು, ಥಿಯೇಟರ್‌ಗಳ ಆರಂಭಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಒಟ್ಟಿನಲ್ಲಿ ದಾವಣಗೆರೆ ಜನರ ಹೈಟೆಕ್ ಬಸ್ ನಿಲ್ದಾಣದ ಬಹುದಿನಗಳ ಕನಸು ನನಸಾಗಿದೆ.

### ನೂತನ ನಿಲ್ದಾಣದ ಸುತ್ತ ಗರಿಗೆದರಿದ ವ್ಯಾಪಾರ

**ನವೀಕರಣ ಹಿನ್ನೆಲೆಯಲ್ಲಿ ಹೈಸ್ಕೂಲ್ ಮೈದಾನಕ್ಕೆ ಬಸ್ ನಿಲ್ದಾಣ ಸ್ಥಳಾಂತರಗೊಳಿಸಿದ್ದರಿಂದ ಕಳೆದ ಕೆಲವು ವರ್ಷಗಳಿಂದ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಮುಂಭಾಗ ಹಾಗೂ ಸುತ್ತ ಮುತ್ತ ವ್ಯಾಪಾರ ವಹಿವಾಟು ಕಡಿಮೆಯಾಗಿತ್ತು.**
**ಈಗ ಮತ್ತೆ ಬಸ್ ನಿಲ್ದಾಣ ಕಾರ್ಯಾರಂಭವಾಗಿದ್ದು, ಜನ ಸಂದಣಿ ಹೆಚ್ಚಾಗುತ್ತಿದೆ. ಶಕ್ತಿ ಯೋಜನೆಯೂ ಪ್ರಯಾಣಿಕರ ಹೆಚ್ಚಳಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ನಿಲ್ದಾಣದ ಒಳಗಷ್ಟೇ ಅಲ್ಲದೆ, ಹೊರ ಭಾಗಗಳಲ್ಲೂ ವ್ಯಾಪಾರ-ವಹಿವಾಟು ಗರಿಗೆದರಿದೆ.**



### ಬನ್ನಿಮಹಾಂಕಾಳಿ ದೇವಿಗೆ ವಿಶೇಷ ಪೂಜೆ

ದಾವಣಗೆರೆ, ಅ. 17 - ನಗರದ ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗದ ಶ್ರೀ ಬನ್ನಿಮಹಾಂಕಾಳಿ ದೇವಿಗೆ ಗುರುವಾರ ಹುಣ್ಣಿಮೆ ಅಂಗವಾಗಿ ವೇ.ಮೂ. ಚನ್ನವೀರಸ್ವಾಮಿ ಅವರ ನೇತೃತ್ವದಲ್ಲಿ ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಯಿತು.

**ಭದ್ರಾ ಜಲಾಶಯ**

ನೀರಿನ ಮಟ್ಟ : 186 ಅಡಿ, ಒಳ ಹರಿವು : 6208 ಕ್ಯೂಸೆಕ್ಸ್,
ಹೊರ ಹರಿವು : 6208 ಕ್ಯೂಸೆಕ್ಸ್, ಕಳೆದ ವರ್ಷ : 156.2 ಅಡಿ

# ಸಾಹಿತಿ ಬಾ.ಮ.ಬಸವರಾಜಯ್ಯಗೆ ಲಲಿತಮ್ಮ ಡಾ.ಚಂದ್ರಶೇಖರ್ ಜೀವಮಾನ ಪ್ರಶಸ್ತಿ

ಹರಿಹರ, ಅ.17 - ನಗರದ ಪ್ರಗತಿಪರ ಬರಹಗಾರರ ಒಕ್ಕೂಟ ಹಾಗೂ ಚಿಂತನ ಪ್ರತಿಷ್ಠಾನ ಇವರ ಸಹಯೋಗದೊಂದಿಗೆ ಲಲಿತಮ್ಮ ಡಾ ಚಂದ್ರಶೇಖರ್ ಅವರ 93ನೇ ಜನ್ಮ ದಿನದ ಅಂಗವಾಗಿ ಹಿರಿಯ ಸಾಹಿತಿ ಹಾಗೂ ಪತ್ರಕರ್ತ ಬಾ.ಮ. ಬಸವರಾಜಯ್ಯನವರಿಗೆ ಲಲಿತಮ್ಮ ಡಾ ಚಂದ್ರಶೇಖರ್ ಜೀವಮಾನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಇದೇ ದಿನಾಂಕ 20 ರ ಭಾನುವಾರ ಬೆಳಗ್ಗೆ 10.30 ಕ್ಕೆ ಬಿರ್ಲಾ ಚೌಟ್ರಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಗತಿಪರ ಒಕ್ಕೂಟದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಕಳೆದ 5 ದಶಕಗಳಿಂದ ದಾವಣಗೆರೆ ಜಿಲ್ಲೆಯಲ್ಲಿ ಸಾಹಿತ್ಯ, ರಾಜಕೀಯ, ರಂಗಭೂಮಿ, ಸಾಂಸ್ಕೃತಿಕ ಮತ್ತು ಪತ್ರಕರ್ತರಾಗಿ ಕ್ರಿಯಾಶೀಲರಾಗಿ ಸಾಮಾಜಿಕ ಸೇವೆ ಮಾಡುತ್ತಾ ಬಂದಿರುವ ಬಾ.ಮ. ಬಸವರಾಜಯ್ಯನವರ ಸೇವಾ ಕ್ಷೇತ್ರದ ಆದರ್ಶಗಳು ಮುಂದಿನ ಪೀಳಿಗೆಗೆ ಮತ್ತು ಯುವ ಜನರಿಗೆ ಮಾರ್ಗದರ್ಶಕವಾಗಲೆಂದು ಲಲಿತಮ್ಮ ಡಾ. ಚಂದ್ರಶೇಖರ್ ಜೀವಮಾನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಜೊತೆಗೆ ಶ್ರೀಮತಿ ಶ್ಯಾಮಲದೇವಿ ಇವರ ಭೂಮಿ ತೂಕದ ತಾಯಿ ಪುಸ್ತಕ ಬಿಡುಗಡೆ ಮತ್ತು ಸುವರ್ಣ ಕವಿ ಕಾವ್ಯ ಸಿರಿ ಕವಿಗೋಷ್ಠಿಯನ್ನೂ ಆಯೋಜಿಸಲಾಗಿದೆ ಎಂದು ಹೇಳಿದರು.



ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ರಾಮಕೃಷ್ಣ ಆಶ್ರಮದ ಶಾರದೇಶಾನಂದಜೀ ವಹಿಸಲಿದ್ದಾರೆ. ಗೌರವ ಉಪಸ್ಥಿತಿ ಲಲಿತಮ್ಮ ಡಾ. ಚಂದ್ರಶೇಖರ್, ಅಧ್ಯಕ್ಷತೆಯನ್ನು ಪ್ರಗತಿಪರ ಒಕ್ಕೂಟದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ, ಅಭಿನಂದನಾ ನುಡಿ ಹಿರಿಯ ಸಾಹಿತಿ ಪ್ರೊ ಸಿ.ವಿ. ಪಾಟೀಲ್ ಮಾತನಾಡಲಿದ್ದಾರೆ.

ಸುವರ್ಣ ಕವಿ ಕಾವ್ಯ ಸಿರಿ ಕವಿಗೋಷ್ಠಿಯನ್ನು ಪತ್ರಕರ್ತ ಬಿ.ಎನ್. ಮಲ್ಲೇಶ್ ಉದ್ಘಾಟಿಸಲಿದ್ದಾರೆ. ಸಾಹಿತಿ ಸೀತಾ ನಾರಾಯಣ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಗೋವಿಂದರಡ್ಡಿ, ವಸಂತಿ ಡಾ. ಫ್ರಾನ್ಸಿಸ್, ಹೆಚ್.ಕೆ. ಕೊಟ್ರಪ್ಪ ಇತರರು ಭಾಗವಹಿಸಲಿದ್ದು, 31 ಜನರು ಕವಿಗೋಷ್ಠಿಯಲ್ಲಿ ಕವಿತೆ ವಾಚಿಸಲಿದ್ದಾರೆ.

ಈ ಸಂದರ್ಭದಲ್ಲಿ ಪ್ರಗತಿಪರ ಒಕ್ಕೂಟದ ಗೌರವ ಅಧ್ಯಕ್ಷ ಹೆಚ್.ಕೆ. ಕೊಟ್ರಪ್ಪ, ಉಪಾಧ್ಯಕ್ಷೆ ಬಿ. ನಾಗರತಮ್ಮ, ಕಾರ್ಯದರ್ಶಿ ಡಿ. ಫ್ರಾನ್ಸಿಸ್ ಕ್ಸೇವಿಯರ್, ಖಜಾಂಚಿ ಎ.ಬಿ. ಮಂಜಮ್ಮ, ಸೀತಾ ನಾರಾಯಣ, ಚಂದನಾ ವೈ. ನೀ. ಮಂಜುನಾಥ್ ಅಗಡಿ, ಶಾಮಲಾ ದೇವಿ, ರಾಧಾ ಹನುಮಂತಪ್ಪ ಇ., ಉಷಾ, ಜಯರಾಮನ್, ಜಿ.ಎಸ್. ಗಾಯತ್ರಿ ಇತರರು ಹಾಜರಿದ್ದರು.

# ಜನಮಾನಸದಲ್ಲಿ ರಾಮಾಯಣ ಜೀವಂತ

## ಜಗಳೂರು: ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಶಾಸಕ ದೇವೇಂದ್ರಪ್ಪ



ಜಗಳೂರು, ಅ. 17 - ಜನ ಮಾನಸದಲ್ಲಿ ರಾಮಾಯಣ, ಮಾಹಾಭಾರತ ಮಹಾ ಕಾವ್ಯಗಳು ಜೀವಂತವಾಗಿವೆ ಎಂದು ಶಾಸಕ ದೇವೇಂದ್ರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ 3.75 ಕೋಟಿ ರೂ.ವೆಚ್ಚದ ನೂತನ ವಾಲ್ಮೀಕಿ ಭವನದಲ್ಲಿ ತಾಲ್ಲೂಕು ಆಡಳಿತ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಪಪಂ ಸಹಯೋಗದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ವಾಲ್ಮೀಕಿ ಭವನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಮಾಯಣವು ದೇಶ-ವಿದೇಶಗಳ ಹಲವು ಭಾಷೆಗಳಿಗೆ ತರ್ಜುಮೆಯಾಗಿರುವುದರಿಂದಲೇ ಅದು ಎಷ್ಟು ಶ್ರೇಷ್ಠ ಎಂಬುದು ತಿಳಿಯುತ್ತದೆ. ದಾರ್ಶನಿಕರ ಜಯಂತಿಗಳನ್ನು ಎಲ್ಲರೂ ಸೇರಿ ಹಬ್ಬಗಳಂತೆ ಆಚರಿಸಿದಾಗ ಮಾತ್ರ ಜಯಂತಿಗಳಿಗೆ ಅರ್ಥ ಬರುತ್ತದೆ ಎಂದು ತಿಳಿಸಿದರು.

ಸರ್ಕಾರಗಳು ಇರುವುದು ಜನರ ಸೇವೆಗಾಗಿ, ಯಾವ ಸರ್ಕಾರಗಳೂ ಮುಖ್ಯವಲ್ಲ. ಜನರಿಗಾಗಿ ಸರ್ಕಾರ ಏನು ಮಾಡಿದೆ ಎಂಬುವುದು ಮುಖ್ಯವಾಗುತ್ತದೆ. ಹಾಗೆಯೇ ಹಿಂದಿನ ಆಡಳಿತದ ಅವಧಿಯಲ್ಲಿ 3.75 ಕೋಟಿ ರೂ ವೆಚ್ಚದಲ್ಲಿ ಪಟ್ಟಣದಲ್ಲಿ ಬೃಹತ್ ವಾಲ್ಮೀಕಿ ಭವನ ಕಟ್ಟಡ ನಿರ್ಮಾಣದ ಶ್ರೇಯ ಮಾಜಿ ಶಾಸಕ ರಾಮಚಂದ್ರಪ್ಪನವರಿಗೆ ಸಲ್ಲುತ್ತದೆ. ಇಂದು ಭವನವನ್ನು ಅವರ ಜೊತೆಗೂಡಿ ಉದ್ಘಾಟನೆ ಮಾಡಿರುವೆ ಎಂದು ತಿಳಿಸಿದರು.

ಮಾಜಿ ಶಾಸಕ ರಾಮಚಂದ್ರಪ್ಪ ಮಾತನಾಡಿ, ನನ್ನ ಅವಧಿಯಲ್ಲಿ ಬೃಹತ್ ವಾಲ್ಮೀಕಿ ಭವನಕ್ಕೆ ಮುಂದಾಗಿದ್ದು, ಇಂದು ಸರ್ಕಾರ ಬದಲಾದರೂ ಪ್ರೋಟೋಕಾಲ್ ಬದಿಗಿಟ್ಟು ಭವನದ ಉದ್ಘಾಟನೆ ನನ್ನ ಜೊತೆಗೂಡಿ ಮಾಡಿದ್ದು ಸಂತಸ ತಂದಿದೆ ಎಂದರು.

ಈ ಹಿಂದೆ ಇಂತಹ ಅವಮಾನವನ್ನು ಕೆಲವರು ಮಾಡಿದ್ದರು. ಆದರೆ ಶಾಸಕ ದೇವೇಂದ್ರಪ್ಪನವರ ದೊಡ್ಡಗುಣ ಇಲ್ಲಿ ನಾನು ಬಂದು ಭವನ ಉದ್ಘಾಟನೆ ಮಾಡುವುದಕ್ಕೆ ಸಾಕ್ಷಿಯಾಗಿದೆ ಎಂದು ಶಾಸಕರನ್ನು ಪ್ರಶಂಸಿಸಿದರು. ಸುಸಜ್ಜಿತ ಕಟ್ಟಡವನ್ನು ಸಾರ್ವಜನಿಕರಿಗೆ ಲೋಕಾರ್ಪಣೆ ಮಾಡಲಾಗಿದೆ. ಇದು ಬರೀ ವಾಲ್ಮೀಕಿ ಸಮುದಾಯಕ್ಕೆ ಸೀಮಿತವಾಗದೆ ಎಲ್ಲಾ ಸಮಾಜದವರು ಇದನ್ನು ಉಪಯೋಗಿಸಿಕೊಳ್ಳಬೇಕು ಎಂದರು.

ಮುಖಂಡರಾದ ಕೆ.ಪಿ. ಪಾಲಯ್ಯ ಮಾತನಾಡಿ, ನಾಯಕ ಸಮಾಜದವರು ಬರೀ ದ್ವೇಷ ಅಸೂಯೇಯ ಹಿಂದೆ ಓಡದೇ ವಾಲ್ಮೀಕಿ ಮಹಾ ಗುರುಗಳ ಆದರ್ಶ ಗುಣಗಳನ್ನು ಅನುಸರಿಸಬೇಕು ಎಂದರು.

ಹಿಂದಿನ ಶಾಸಕ ರಾಮಚಂದ್ರಪ್ಪನವರ ಅವಧಿಯಲ್ಲಿ ವಾಲ್ಮೀಕಿ ಭವನ ನಿರ್ಮಾಣ ಹಂತದಲ್ಲಿತ್ತು. ಇದನ್ನು ಮನಗಂಡ ಶಾಸಕ ದೇವೇಂದ್ರಪ್ಪ ಅವರು ಲೋಕಾರ್ಪಣೆಗೆ ಮಾಜಿ ಶಾಸಕ ರಾಮಚಂದ್ರ ಅವರೂ ಬರಲಿ ಎಂದು ಒಂದು ಗಂಟೆಗೂ ಹೆಚ್ಚು ಕಾಲ ನೂತನ ಭವನದ ಮುಂದೆ ಕಾದು ಕುಳಿತು, ಅವರು ಆಗಮಿಸಿದ ನಂತರ ಅವರ ಜೊತೆಗೂಡಿ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ, ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಉಪಾಧ್ಯಕ್ಷೆ ಲೋಕಮ್ಮ, ಸದಸ್ಯರಾದ ಸರೋಜಮ್ಮ, ಲಲಿತಮ್ಮ, ತಿಪ್ಪೇಸ್ವಾಮಿ, ಮಹಮದ್ ಆಲಿ, ಶಕೀಲ್ ಅಹಮದ್, ರಮೇಶ್, ವಿಶಾಲಾಕ್ಷಿ, ಪಾಪಲಿಂಗಪ್ಪ, ವಕೀಲರ ಸಂಘದ ಅಧ್ಯಕ್ಷ ಟಿ.ಬಸವರಾಜ್, ಮುಖಂಡರಾದ ಕಲ್ಲೇಶ್‌ರಾಜ್ ಪಟೇಲ್, ಬಿ. ಮಹೇಶ್ವರಪ್ಪ, ಶ್ರೀ ಮತಿ ವೀಣಾ, ಬಿಇಓ ಹಾಲಮೂರ್ತಿ, ತಾಪಂ ಇಓ ಕೆಂಚಪ್ಪ ಮುಂತಾದವರು ಇದ್ದರು.

# ಹರಿಯಾಣ ಸಿಎಂ ಆಗಿ ನಯಾಬ್ ಸಿಂಗ್ ಸೈನಿ ಪ್ರಮಾಣವಚನ



ಚಂಡೀಘಡ, ಅ. 17 - ಹರಿಯಾಣದ ಮುಖ್ಯಮಂತ್ರಿಯಾಗಿ ನಯಾಬ್ ಸಿಂಗ್ ಸೈನಿ ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಹಲವಾರು ಎನ್.ಡಿ.ಎ. ನಾಯಕರು ಪಾಲ್ಗೊಂಡಿದ್ದರು. ದಸರಾ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಪ್ರಮಾಣ ವಚನ ಬೋಧಿಸಿದರು. ಸೈನಿ ಹಾಗೂ ಇತರೆ 13 ಸಚಿವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ವಾಲ್ಮೀಕಿ ಜಯಂತಿ ದಿನದಂದು ಆಯೋಜಿಸಲಾಗಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು.

# ಪೌರತ್ವ ಕಾಯ್ದೆ ಸೆಕ್ಷನ್ 6ಎ ಸಿಂಧುತ್ವ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ನವದೆಹಲಿ, ಅ. 17 - ಮಾರ್ಚ್ 25, 1971ಕ್ಕಿಂತ ಮುಂಚೆ ಬಾಂಗ್ಲಾದೇಶದಿಂದ ಅಸ್ಸಾಂಗೆ ವಲಸೆ ಬಂದವರಿಗೆ ಭಾರತದ ಪೌರತ್ವ ನೀಡುವ ಪೌರತ್ವ ಕಾಯ್ದೆಯ ಸೆಕ್ಷನ್ 6ಎ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಎ.ಎಂ. ಸುಂದರೇಶ್ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ಮಹತ್ವದ ಬಹುಮತದ ತೀರ್ಪು ನೀಡಿದೆ.

1985ರಲ್ಲಿ ಪೌರತ್ವ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸೆಕ್ಷನ್ 6ಎ ಸೇರ್ಪಡೆ ಮಾಡಲಾಗಿತ್ತು. ಆಗಿನ ರಾಜೀವ್ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಪ್ರತಿಭಟನಾ ನಿರತ ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್ ನಡುವಿನ ಒಪ್ಪಂದದ ಅನ್ವಯ ಈ ಸೆಕ್ಷನ್ ಸೇರಿಸಲಾಗಿತ್ತು.

ಜನವರಿ 1, 1966ರ ನಂತರ ಹಾಗೂ ಮಾರ್ಚ್ 25, 1971ಕ್ಕೆ ಮುಂಚೆ ಬಾಂಗ್ಲಾದೇಶದಿಂದ ಅಸ್ಸಾಂಗೆ ಬಂದವರಿಗೆ ಪೌರತ್ವ ನೀಡಲು ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಕಾಂತ್, ಸುಂದರೇಶ್ ಹಾಗೂ ಮಿಶ್ರ ಅವರು ಸೆಕ್ಷನ್ 6ಎ ಸಿಂಧುತ್ವ ಎತ್ತಿ ಹಿಡಿದಿದ್ದಾರೆ. ನ್ಯಾಯಮೂರ್ತಿ ಜೆ.ಬಿ. ಪರ್ಡಿವಾಲ ಅವರು ಅಲ್ಪಮತದ ತೀರ್ಪು ನೀಡಿದ್ದಾರೆ.






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas